# ಜನತಾವಾಣಿ

ಸಂಪಾದಕರು :
ವಿಕಾಸ್ ಷಡಾಕ್ಷರಪ್ಪ ಮೆಳ್ಳೇಕಟ್ಟೆ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ದಾವಣಗೆರೆ
ಗುರುವಾರ, ಸೆಪ್ಟೆಂಬರ್ 16, 2021

ಸಂಪುಟ : 48 ಸಂಚಿಕೆ : 124 ☎ 254736 91642 99999 RNI No: 27369/75 KA/SK/CTA-275/2021-2023. O/P @ B.V. Nagar P.O. ಪುಟ : 4 ರೂ : 4.00 www.janathavani.com janathavani@mac.com





ಮಲೇಬೆನ್ನೂರು ಪಟ್ಟಣದ ಹೊರವಲಯದಲ್ಲಿರುವ ಶ್ರೀ ವೀರಭದ್ರೇಶ್ವರ ದೇವಸ್ಥಾನದಲ್ಲಿ ವೀರಭದ್ರೇಶ್ವರ ಜಯಂತ್ಯೋತ್ಸವದ ಅಂಗವಾಗಿ ಮಂಗಳವಾರ ರಾತ್ರಿ ಹಮ್ಮಿಕೊಂಡಿದ್ದ ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಶಿವಮೊಗ್ಗದ ಅಂತರರಾಷ್ಟ್ರೀಯ ಭರತನಾಟ್ಯ ಕಲಾವಿದ ವಿದ್ವಾನ್ ಕೇಶವಕುಮಾರ್ ಶಿಷ್ಯಂದಿರು ನಡೆಸಿಕೊಟ್ಟ ದಕ್ಷಯಜ್ಞ ನೃತ್ಯರೂಪಕ ಪ್ರೇಕ್ಷಕರನ್ನು ಹಿಡಿದಿಟ್ಟುಕೊಂಡಿತ್ತು.

# ಟೆಲಿಕಾಂ ವಲಯಕ್ಕೆ ಟಾನಿಕ್

## ಶುಲ್ಕ ಪಾವತಿಗೆ ತಡೆ, ಶೇ.100ರ ವಿದೇಶಿ ಹೂಡಿಕೆಗೆ ಕೇಂದ್ರ ಸಂಪುಟ ಅನುಮತಿ

ನವದೆಹಲಿ, ಸೆ. 15 - ಟೆಲಿಕಾಂ ವಲಯದಲ್ಲಿ ದೊಡ್ಡ ಸುಧಾರಣಾ ಕ್ರಮ ತೆಗೆದುಕೊಂಡಿರುವ ಕೇಂದ್ರ ಸರ್ಕಾರ, ಟೆಲಿಕಾಂ ಕಂಪನಿಗಳ ಬಾಕಿ ಪಾವತಿಗೆ ನಾಲ್ಕು ವರ್ಷಗಳ ಕಾಲ ತಡೆ ಹಾಕಿದೆ ಹಾಗೂ ಸ್ವಯಂ ಚಾಲಿತ ಮಾರ್ಗದ ಮೂಲಕ ಶೇ.100ರ ವಿದೇಶಿ ಹೂಡಿಕೆಗೆ ಅನುಮತಿ ನೀಡಿದೆ.

ಸಂಪುಟ ಸಭೆಯಲ್ಲಿ ತೆಗೆದುಕೊಳ್ಳಲಾದ ಈ ನಿರ್ಧಾರದ ಬಗ್ಗೆ ವಿವರ ನೀಡಿರುವ ಕೇಂದ್ರ ಟೆಲಿಕಾಂ ಸಚಿವ ಅಶ್ವನಿ ವೈಷ್ಣವ್, ಟೆಲಿಕಾಂ ವಲಯದಲ್ಲಿ ಒಂಭತ್ತು ಸುಧಾರಣಾ ಕ್ರಮಗಳಿಗೆ ಅನುಮತಿ ನೀಡಲಾಗಿದೆ ಎಂದಿದ್ದಾರೆ.

ಎ.ಜಿ.ಆರ್. ಬಾಕಿ ಪಾವತಿ ಟೆಲಿಕಾಂ ವಲಯದ ಮೇಲೆ ಭಾರೀ ಒತ್ತಡಕ್ಕೆ ಕಾರಣವಾಗಿತ್ತು. ಶಾಸನಾತ್ಮಕವಾಗಿ ಪಾವತಿಸಬೇಕಿರುವ ಆದಾಯವನ್ನು ಎ.ಜಿ.ಆರ್. ಎಂದು ಕರೆಯಲಾಗುತ್ತದೆ.

ಟೆಲಿಕಾಂ ಹೊರತಾಗಿ ಬಂದ ಆದಾಯವನ್ನು ಎ.ಜಿ.ಆರ್.ನಿಂದ ಹೊರಗಿಡಲಾಗುವುದು. ಟೆಲಿಕಾಂ ವಲಯದ ಮೇಲೆ ಭಾರೀ ಬಡ್ಡಿ, ದಂಡ ಹಾಗೂ ದಂಡದ ಮೇಲೆ ಬಡ್ಡಿ, ಅನುಮತಿ ಶುಲ್ಕ, ಸ್ಪೆಕ್ಟ್ರಮ್ ಶುಲ್ಕ ಹಾಗೂ ಇತರೆ ಎಲ್ಲ ಶುಲ್ಕಗಳನ್ನು ವಿಧಿಸಲಾಗುತ್ತಿತ್ತು. ಅದನ್ನೀಗ ಸರಿಪಡಿಸಲಾಗಿದೆ ಎಂದು ಸಚಿವರು ಹೇಳಿದ್ದಾರೆ.

ಮಾಸಿಕ ಚಕ್ರ ಬಡ್ಡಿ ಬದಲು ವಾರ್ಷಿಕ ಚಕ್ರ ಬಡ್ಡಿ ವಿಧಿಸಲಾಗುವುದು. ಸೂಕ್ತ ಬಡ್ಡಿ ವಿಧಿಸಲಾಗುವುದು ಹಾಗೂ ದಂಡವನ್ನು ಸಂಪೂರ್ಣ ಕೈ ಬಿಡಲಾಗುವುದು. ಇದರಿಂದ ಟೆಲಿಕಾಂ ವಲಯದಲ್ಲಿ ದೊಡ್ಡ ಹೂಡಿಕೆ ಬರಲಿದೆ ಹಾಗೂ ಉದ್ಯೋಗಾವಕಾಶ ಹೆಚ್ಚಾಗಲಿದೆ ಎಂದು ವೈಷ್ಣವ್ ಹೇಳಿದ್ದಾರೆ.

ಮುಂದಿನ ಹರಾಜುಗಳಲ್ಲಿ ಸ್ಪೆಕ್ಟ್ರಮ್ ಶುಲ್ಕದ ಅವಧಿಯನ್ನು 20 ವರ್ಷಗಳ ಬದಲು 30 ವರ್ಷವಾಗಲಿದೆ. ಸ್ಪೆಕ್ಟ್ರಮ್ ಪಡೆದ ನಂತರದ ಹತ್ತು ವರ್ಷಗಳಲ್ಲಿ ತಂತ್ರಜ್ಞಾನ ಬದಲಾದಲ್ಲಿ ಸ್ಪೆಕ್ಟ್ರಮ್ (3ನೇ ಪುಟಕ್ಕೆ)

### ಆಟೋಮೊಬೈಲ್, ಡ್ರೋನ್ ವಲಯಕ್ಕೆ 26,058 ಕೋಟಿ ರೂ. ಉತ್ಪಾದನಾ ಉತ್ತೇಜನ

**ನವದೆಹಲಿ, ಸೆ. 15 - ಆಟೋಮೊಬೈಲ್ ಹಾಗೂ ಡ್ರೋನ್ ಉದ್ಯಮಗಳಿಗೆ 26,058 ಕೋಟಿ ರೂ.ಗಳ ಉತ್ಪಾದನೆ ಆಧರಿತ ಉತ್ತೇಜನ ನೀಡಲು ಕೇಂದ್ರ ಸಂಪುಟ ಸಮ್ಮತಿಸಿದೆ ಎಂದು ಕೇಂದ್ರ ಸಚಿವ ಅನುರಾಗ್ ಠಾಕೂರ್ ತಿಳಿಸಿದ್ದಾರೆ. ಮುಂದಿನ ಐದು ವರ್ಷಗಳಲ್ಲಿ 26,058 ಕೋಟಿ ರೂ.ಗಳ ಉತ್ತೇಜನ ನೀಡಲಾಗುವುದು. ಇದರಿಂದ ಆಟೋಮೊಬೈಲ್ ವಲಯ ವಿಶ್ವದ ಪೂರೈಕೆ ಜಾಲ ಹೊಂದಲಿದೆ ಎಂದು ಸಚಿವರು ಹೇಳಿದ್ದಾರೆ.**

### ಮುಂದಿನ ವರ್ಷದ ಫೆಬ್ರವರಿಯಲ್ಲಿ 5ಜಿ ಸ್ಪೆಕ್ಟ್ರಮ್ ಹರಾಜು

**ನವದೆಹಲಿ, ಸೆ. 15 – 2022ರ ಫೆಬ್ರವರಿಯಲ್ಲಿ 5ಜಿ ಸ್ಪೆಕ್ಟ್ರಮ್ ಹರಾಜು ನಡೆಯುವ ಸಾಧ್ಯತೆ ಇದೆ ಎಂದು ಟೆಲಿಕಾಂ ಸಚಿವ ಅಶ್ವಿನಿ ವೈಷ್ಣವ್ ತಿಳಿಸಿದ್ದಾರೆ. ಖಾಸಗಿ ಸುದ್ದಿಸಂಸ್ಥೆಯೊಂದರ ಜೊತೆ ಮಾತನಾಡುತ್ತಿದ್ದ ಅವರು, ಈ ವರ್ಷದ ಕೊನೆಯ ವೇಳೆಗೆ ಹರಾಜು ನಡೆಯಬೇಕಿತ್ತು. ಈಗ ಮುಂದಿನ ವರ್ಷದ ಫೆಬ್ರವರಿಯಲ್ಲಿ ನಡೆಸಲು ಉದ್ದೇಶಿಸಲಾಗಿದೆ. ಸಾಧ್ಯವಾದಲ್ಲಿ ಜನವರಿಯಲ್ಲೇ ಹರಾಜು ಮಾಡಲಾಗುವುದು ಎಂದು ತಿಳಿಸಿದ್ದಾರೆ.**

## ಜೆಇಇ - ಅಡ್ವಾನ್ಸಡ್ ಪರೀಕ್ಷೆಗೆ ಅರ್ಜಿ ಆರಂಭ

ನವದೆಹಲಿ, ಸೆ. 15 - ಜೆ.ಇ.ಇ. - ಅಡ್ವಾನ್ಸಡ್ ಪರೀಕ್ಷೆಗೆ ಅರ್ಜಿ ದಾಖಲಿಸುವ ಪ್ರಕ್ರಿಯೆ ಆರಂಭ ವಾಗಿದೆ. ಜೆಇಇ-ಮೇನ್ ಫಲಿತಾಂಶ ವಿಳಂಬವಾದ ಕಾರಣ 2 ಬಾರಿ ಪರೀಕ್ಷೆ ಮುಂದೂಡಲಾಗಿತ್ತು. ಜೆಇಇ-ಮೇನ್ಸ್ ಅನ್ನು ದೇಶಾದ್ಯಂತ ಇರುವ ಇಂಜಿನಿಯರಿಂಗ್ ಕಾಲೇಜುಗಳ ಪ್ರವೇಶಕ್ಕಾಗಿ ನಡೆಸಲಾಗುತ್ತದೆ. ಜೆಇಇ - ಅಡ್ವಾನ್ಸಡ್ ಪರೀಕ್ಷೆಗೆ ಸೆಪ್ಟೆಂಬರ್ 20ರವರೆಗೆ ಅರ್ಜಿ ದಾಖಲಿಸಬಹುದು. ಸೆಪ್ಟೆಂಬರ್ 21ರವರೆಗೆ ಶುಲ್ಕ ಪಾವತಿಸಬಹುದು. ಪರೀಕ್ಷೆ ಅಕ್ಟೋಬರ್ 3ರಂದು ನಡೆಯಲಿದೆ.

## ಗ್ರಾಮಕ್ಕೊಂದರಂತೆ ಸ್ಮಶಾನಕ್ಕೆ ಕ್ರಮ



ಬೆಂಗಳೂರು, ಸೆ. 15 - ರಾಜ್ಯಾದ್ಯಂತ ಗ್ರಾಮಕ್ಕೊಂದರಂತೆ ಸ್ಮಶಾನ ಇರಬೇಕು, ಎಲ್ಲೆಲ್ಲಿ ಸ್ಮಶಾನ ಇಲ್ಲವೋ ಅಲ್ಲಿನ ಜಿಲ್ಲಾಧಿಕಾರಿಗಳ ಮೂಲಕ ವರದಿ ಪಡೆದು ಸೂಕ್ತ ಕ್ರಮ ಕೈಗೊಳ್ಳುವುದಾಗಿ ಕಂದಾಯ ಸಚಿವ ಆರ್. ಅಶೋಕ್ ತಿಳಿಸಿದರು.

ವಿಧಾನ ಪರಿಷತ್‌ನಲ್ಲಿಂದು ಮಹಂತೇಶ ಕವಟಗಿ ಮಠ ಪ್ರಶ್ನೆಗೆ ಉತ್ತರ ನೀಡಿದ ಸಚಿವರು, ಗ್ರಾಮಕ್ಕೊಂದು ಸ್ಮಶಾನ ಇರಬೇಕು, ಇದಕ್ಕಾಗಿ ಮೂರು ವರ್ಷಗಳಲ್ಲಿ ರಾಜ್ಯ ಸರ್ಕಾರ 26 ಕೋಟಿ ರೂ. ಬಿಡುಗಡೆ ಮಾಡಿದೆ ಎಂದು ಹೇಳಿದರು.

ರಾಜ್ಯದ 372 ತಾಲ್ಲೂಕುಗಳಲ್ಲಿ ಸ್ಮಶಾನ ಇಲ್ಲ ಎಂಬ ವರದಿ ಇದೆ, ಸರ್ಕಾರ ಹಣ ನೀಡುತ್ತದೆ. ಆದರೆ, ಕೃಷಿ ಭೂಮಿ ಬೆಲೆ ಹೆಚ್ಚಿರುವುದರಿಂದ, ಸರ್ಕಾರ ನಿಗದಿ ಮಾಡಿರುವ ದರದಲ್ಲಿ ಜಾಗ ಖರೀದಿ ಮಾಡಲಾಗುತ್ತಿಲ್ಲ. ಅದಕ್ಕಾಗಿ ಜಿಲ್ಲಾಧಿಕಾರಿಗಳಿಂದ ವಿಶೇಷ ಪ್ರಸ್ತಾವನೆ ಪಡೆದು ಹೆಚ್ಚುವರಿ ಹಣ ನೀಡಿ, ಸ್ಮಶಾನಕ್ಕಾಗಿ ಭೂಮಿ ಖರೀದಿ ಮಾಡಲಾಗುವುದು ಎಂದರು.

# ಈರುಳ್ಳಿ ಸುರಿದು ಕನಿಷ್ಠ ಬೆಂಬಲ ಬೆಲೆಗೆ ಆಗ್ರಹ

ದಾವಣಗೆರೆ, ಸೆ.15- ಈರುಳ್ಳಿ ಸೇರಿದಂತೆ ರೈತರ ಬೆಳೆಗಳಿಗೆ ಕನಿಷ್ಠ ಬೆಂಬಲ ಬೆಲೆ ಘೋಷಿಸುವಂತೆ ಆಗ್ರಹಿಸಿ ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆ (ಹುಚ್ಚವ್ವನಹಳ್ಳಿ ಮಂಜುನಾಥ ಬಣ) ನೇತೃತ್ವದಲ್ಲಿ ನಗರದ ತಹಸೀಲ್ದಾರ್ ಕಚೇರಿ ಆವರಣದಲ್ಲಿ ಈರುಳ್ಳಿ ಸುರಿದು ಪ್ರತಿಭಟಿಸಿ ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಗಮನ ಸೆಳೆಯಲಾಯಿತು.

ಕನಿಷ್ಠ ಬೆಂಬಲ ಬೆಲೆಯ ಕಾಯ್ದೆ ರೂಪಿಸುವಂತೆ ಸತತ ಹಲವು ವರ್ಷ ಗಳಿಂದ ಒತ್ತಾಯಿಸುತ್ತಿದ್ದರೂ ಕೇಂದ್ರ ಸರ್ಕಾರ ಕಂಡರೂ ಕಾಣದಂತೆ, ಕೇಳಿಸಿದರೂ ಕೇಳಿಸದಂತೆ ನಾಟಕ ಮಾಡುತ್ತಾ, ರೈತ ವಿರೋಧಿ ನೀತಿ ಅನುಸರಿಸುತ್ತಿದೆ ಎಂದು ಸೇನೆಯ ರಾಜ್ಯಾಧ್ಯಕ್ಷ ಹುಚ್ಚವ್ವನಹಳ್ಳಿ ಮಂಜುನಾಥ ಆಕ್ರೋಶ ವ್ಯಕ್ತಪಡಿಸಿದರು.

ಇವತ್ತಿನ ಬೆಲೆ ಕುಸಿತಕ್ಕೆ ಕೇಂದ್ರ ಸರ್ಕಾರವೇ ಸಂಪೂರ್ಣ ಹೊಣೆ ಯಾಗಲಿದೆ. ಕನಿಷ್ಠ ಬೆಂಬಲ ಬೆಲೆ ಕಾಯ್ದೆ ರೂಪಿಸಿದ್ದರೆ ಇವತ್ತು ರೈತರು ಸಂಕಷ್ಟ ಅನುಭವಿಸುವ ಪರಿಸ್ಥಿತಿ ಬರುತ್ತಿರಲಿಲ್ಲ ಎಂದು ಆಕ್ಷೇಪಿಸಿದರ ಲ್ಲದೇ, ಕನಿಷ್ಠ ಬೆಂಬಲ ಬೆಲೆ ಕಾಯ್ದೆ ರೂಪಿಸುವಂತೆ ಒತ್ತಾಯಿಸಿದರು.

ಕಳೆದ 4 ವರ್ಷದಿಂದ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಈರುಳ್ಳಿಗೆ ಕನಿಷ್ಠ ಬೆಂಬಲ ಬೆಲೆ ಘೋಷಿಸಿಲ್ಲ. ಕಳೆದ 4 ವರ್ಷಗಳ ಹಿಂದೆ ಒಂದು ಕ್ವಿಂಟಾಲ್ ಈರುಳ್ಳಿಗೆ 800 ರೂ. ನಿಗದಿ ಮಾಡಲಾಗಿತ್ತು. ಈಗೇನಾ ದ ರೂ ಬೆಂಬಲ ಬೆಲೆಗೆ ಕಾಯ್ದೆ ರೂಪಿಸಿ ದ್ದರೆ ಕನಿಷ್ಠ ಒಂದು ಕೆಜಿಗೆ 8 ರೂ. ಬೆಲೆ ಇರುತ್ತಿತ್ತು. ಆದರೆ ಈಗ ಮಾರುಕಟ್ಟೆ ಯಲ್ಲಿ ಕೇವಲ 1 ರೂ.ಗೆ ಈರುಳ್ಳಿ ಮಾರಾಟವಾಗುತ್ತಿದ್ದು, ರೈತರಿಗೆ ಹಾಕಿದ ಬಂಡವಾಳ ವೂ ಸಿಗದೇ ನಷ್ಟ ಅನುಭವಿಸುವಂತಾಗಿದೆ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಒಂದು ಕ್ವಿಂಟಾಲ್ ಈರುಳ್ಳಿಗೆ 2 ಸಾವಿರ ಬೆಂಬಲ ಬೆಲೆ ಘೋಷಿಸುವಂತೆ ಉಭಯ ಸರ್ಕಾರಗಳನ್ನು ಒತ್ತಾಯಿಸಿದರು. (2ನೇ ಪುಟಕ್ಕೆ)



# ಬ್ಯಾಂಕ್‌ನಿಂದ ತಪ್ಪಾಗಿ ಹಣ ಜಮಾ

## ಮೋದಿ ಹಣ ಎಂದು ವಾಪಸ್ ಕೊಡದವನಿಗೆ ಜೈಲು

ಖಗಾರಿಯ (ಬಿಹಾರ), ಸೆ. 15 – ತಪ್ಪಾಗಿ ಬ್ಯಾಂಕು ತನ್ನ ಖಾತೆಗೆ ಜಮಾ ಮಾಡಿದ್ದ ಹಣವನ್ನು ಮರಳಿಸಲು ನಿರಾಕರಿಸಿದ ಬಿಹಾರದ ವ್ಯಕ್ತಿಯೋರ್ವ ಈಗ ಜೈಲು ಪಾಲಾಗಿದ್ದಾನೆ. ತನ್ನ ಖಾತೆಗೆ ಜಮಾ ಆಗಿರುವ ಹಣ ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರ ಕೊಡುಗೆ ಎಂದು ವ್ಯಕ್ತಿ ವಾದಿಸಿದ್ದ.

ಖಗಾರಿಯ ಜಿಲ್ಲೆಯ ಬಖ್ತಿಯಾರಪುರದ ವಾಸಿ ರಣಜಿತ್ ದಾಸ್ ಎಂಬುವವರ ಖಾತೆಗೆ ಗ್ರಾಮೀಣ ಬ್ಯಾಂಕ್ ಕಣ್ತಪ್ಪಿನಿಂದಾಗಿ 5.50 ಲಕ್ಷ ರೂ.ಗಳ ಹಣ ಜಮಾ ಆಗಿತ್ತು.

ಈ ತಪ್ಪು ಕಂಡು ಬಂದ ನಂತರ, ದಾಸ್ ಹಣ ಮರಳಿಸಬೇಕೆಂದು ಸೂಚನೆ ನೀಡಲಾಗಿತ್ತು ಎಂದು ಮಾನಸಿ ಪೊಲೀಸ್ ಠಾಣಾಧಿಕಾರಿ ದೀಪಕ್ ಕುಮಾರ್ ಹೇಳಿದ್ದಾರೆ.

ಪದೇ ಪದೇ ನೋಟಿಸ್ ಕಳಿಸಿದರೂ ಸಹ ಹಣ ಮರಳಿಸಲು ನಿರಾಕರಿಸಿದ್ದ ದಾಸ್, ಈ ಹಣವನ್ನು ಪ್ರಧಾನ ಮಂತ್ರಿ ಮೋದಿ ಕಳಿಸಿದ್ದಾರೆ ಎಂದು ಹೇಳಿದ್ದ.

ನಂತರ ಬ್ಯಾಂಕ್ ನೀಡಿದ ದೂರಿನ ಆಧಾರದ ಮೇಲೆ ಪ್ರಕರಣ ದಾಖಲಿಸಲಾಗಿತ್ತು. ಆರೋಪಿಯನ್ನು ಈಗ ಸಂಬಂಧಿಸಿದ ಐ.ಪಿ.ಎಸ್. ಸೆಕ್ಷನ್‌ಗಳ ಆಧಾರದ ಮೇಲೆ ಜೈಲಿಗೆ ಕಳಿಸಲಾಗಿದೆ ಎಂದು ದೀಪಕ್ ಕುಮಾರ್ ತಿಳಿಸಿದ್ದಾರೆ.

2014ರ ಚುನಾವಣಾ ಪ್ರಚಾರದಲ್ಲಿ ಭಾಗಿಯಾಗಿದ್ದ ಸಂದರ್ಭದಲ್ಲಿ ಪ್ರಧಾನಿ ಮೋದಿ, ವಿದೇಶದಲ್ಲಿರುವ ಕಪ್ಪು ಹಣ ಎಷ್ಟಿದೆ ಎಂದರೆ ಅದನ್ನು ವಾಪಸ್ ತಂದರೆ ಪ್ರತಿಯೊಬ್ಬರ ಬ್ಯಾಂಕ್ ಖಾತೆಗೆ 15 ಲಕ್ಷ ರೂ. ಹಣ ಬರಲಿದೆ ಎಂದು ಹೇಳಿದ್ದರು.

ಈಗಿರುವ ಕಾನೂನಿನ ಪ್ರಕಾರ, ಬ್ಯಾಂಕ್ ತಪ್ಪಿನಿಂದಾಗಿ ಒಬ್ಬರ ಖಾತೆಗೆ ಹಣ ಜಮಾ ಮಾಡಿದರೆ ಅದನ್ನು ಬಳಸುವುದು ಅಪರಾಧವಾಗಿದೆ. ಹಣ ಬಳಸಿಕೊಂಡವರಿಂದ ವಸೂಲಿ ಮಾಡುವ ಸ್ವಾತಂತ್ರ್ಯ ಹಣಕಾಸು ಸಂಸ್ಥೆಗಳಿಗಿದೆ.

## ಷೇರು ಪೇಟೆಯಲ್ಲಿ ಭಾರೀ ಏರಿಕೆ

ಮುಂಬೈ, ಸೆ. 5 - ಟೆಲಿಕಾಂ ಹಾಗೂ ಆಟೋಮೊಬೈಲ್ ಷೇರುಗಳಲ್ಲಿ ಭಾರೀ ಏರಿಕೆ ಕಂಡ ಕಾರಣ ಮುಂಬೈ ಷೇರು ಸೂಚ್ಯಂಕ ಏರಿಕೆಯಾಗಿದ್ದು, ದಾಖಲೆ ಹಂತಕ್ಕೆ ತಲುಪಿದೆ. ಸರ್ಕಾರ ಈ ವಲಯಗಳಿಗೆ ಪ್ಯಾಕೇಜ್‌ಗಳನ್ನು ಪ್ರಕಟಿಸಿರುವ ಹಿನ್ನೆಲೆಯಲ್ಲಿ ಷೇರುಗಳಲ್ಲಿ ಏರಿಕೆಯಾಗಿದೆ.

ಇದೇ ದಿನ ರೂಪಾಯಿ ಮೌಲ್ಯ ಏರಿಕೆಯಾಗಿರುವುದು ಹಾಗೂ ವಿದೇಶಿ ಬಂಡವಾಳ ಹರಿದು ಬಂದಿರುವುದು ಸಹ ಷೇರುಪೇಟೆಯಲ್ಲಿ ಉತ್ಸಾಹಕ್ಕೆ ಕಾರಣವಾಗಿದೆ ಎಂದು ವರ್ತಕರು ತಿಳಿಸಿದ್ದಾರೆ. ಷೇರು ಪೇಟೆಯಲ್ಲಿ 476 ಅಂಕಗಳ ಏರಿಕೆಯಿಂದಾಗಿ 58223ರ ಹಂತಕ್ಕೆ ತಲುಪಿದೆ. ಇದೇ ದಿನ ರಾಷ್ಟ್ರೀಯ ಸೂಚಂಕ ನಿಫ್ಟಿ (3ನೇ ಪುಟಕ್ಕೆ)

## 2023ರಲ್ಲಿ ಗಗನಯಾನ



ನವದೆಹಲಿ, ಸೆ. 15 - ಭಾರತದ ಗಗನಯಾನ 2022ರ ಅಂತ್ಯ ಇಲ್ಲವೇ 2023ರ ಆರಂಭದ ವೇಳೆ ನಡೆಯಲಿದೆ ಎಂದು ಕೇಂದ್ರ ಸಚಿವ ಜಿತೇಂದ್ರ ಸಿಂಗ್ ತಿಳಿಸಿದ್ದಾರೆ. 2022ರಲ್ಲಿ ಗಗನಯಾನ ನಡೆಸಲು ಉದ್ದೇಶಿಸಲಾಗಿತ್ತು. ಕೊರೊನಾದಿಂದಾಗಿ ಗಗನಯಾನ ಮುಂದೂಡಲಾಗಿದೆ.

ಗಗನಯಾನದ ಮೂಲಕ, ಗಗನಯಾತ್ರಿಗಳನ್ನು ಭೂಮಿಯ ಕೆಳ ಕಕ್ಷೆಗೆ ರವಾನಿಸಲಾಗುವುದು.

## ಬಿ.ಟಿ. ಜಾಹ್ನವಿಗೆ ಸಾಹಿತ್ಯಶ್ರೀ ಪ್ರಶಸ್ತಿ



ಬೆಂಗಳೂರು, ಸೆ.15- ಕರ್ನಾಟಕ ಸಾಹಿತ್ಯ ಅಕಾಡೆಮಿಯು ಪ್ರತಿ ವರ್ಷ ಕೊಡಮಾಡುವ ಪ್ರತಿಷ್ಠಿತ 'ಸಾಹಿತ್ಯಶ್ರೀ ಗೌರವ ಪ್ರಶಸ್ತಿ'ಗೆ ಭಾಜನರಾಗಿರುವ ನಗರದ ಹಿರಿಯ ಲೇಖಕಿ ಬಿ.ಟಿ.ಜಾಹ್ನವಿ ನಿರಂಜನ ಅವರಿಗೆ ಕರ್ನಾಟಕ ಸಾಹಿತ್ಯ ಅಕಾಡೆಮಿಯು ಬೆಂಗಳೂರಿನ ರವೀಂದ್ರ ಕಲಾ ಕ್ಷೇತ್ರದಲ್ಲಿ ಭಾನುವಾರ ಏರ್ಪಡಿಸಿದ್ದ ಸಮಾರಂಭದಲ್ಲಿ ಪ್ರಶಸ್ತಿ ಪ್ರದಾನ (3ನೇ ಪುಟಕ್ಕೆ)

## ಉತ್ತರ ಪ್ರದೇಶದ ರಾಜಭವನದಲ್ಲಿ ಶಿವ ಮೂರ್ತಿ ಸ್ಥಾಪನೆ

ಲಖ್ನೌ, ಸೆ. 15 - ಉತ್ತರಪ್ರದೇಶದ ರಾಜಭವನದಲ್ಲಿ ಭವ್ಯ ಶಿವ ಮೂರ್ತಿ ಸ್ಥಾಪನೆಗಾಗಿ ರಾಜ್ಯಪಾಲ ಆನಂದಿಬೆನ್ ಪಟೇಲ್ ಅವರು ಬುಧವಾರ ಭೂಮಿ ಪೂಜೆ ನೆರವೇರಿಸಿದ್ದಾರೆ. ಅಧಿಕಾರಿಗಳ ಉಪಸ್ಥಿತಿಯಲ್ಲಿ ಭೂಮಿ ಪೂಜೆ ನೆರವೇರಿಸಲಾಯಿತು ಎಂದು ಸರ್ಕಾರದ ಹೇಳಿಕೆಯಲ್ಲಿ ತಿಳಿಸಲಾಗಿದೆ.

ಶಿವ ದೇವರ ಮೂರ್ತಿ 4 ಅಡಿ ಎತ್ತರದ್ದಾಗಿರಲಿದೆ. ಇದನ್ನು 10 ಅಡಿ ಉದ್ದ ಹಾಗೂ 7 ಅಡಿ ಅಗಲದ ಗ್ರಾನೈಟ್ ವೇದಿಕೆ ಮೇಲೆ ಅಳವಡಿಸಲಾಗುವುದು ಎಂದು ಹೇಳಿಕೆಯಲ್ಲಿ ತಿಳಿಸಲಾಗಿದೆ.

## ಜಿಲ್ಲೆಯಲ್ಲಿ 7 ಜನರಿಗೆ ಪಾಸಿಟಿವ್

ದಾವಣಗೆರೆ, ಸೆ.15- ಜಿಲ್ಲೆಯಲ್ಲಿ 7 ಜನರಿಗೆ ಕೊರೊನಾ ಪಾಸಿಟಿವ್ ದೃಢಪಟ್ಟಿರುವ ಬಗ್ಗೆ ಜಿಲ್ಲಾಧಿಕಾರಿಗಳ ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ದಾವಣಗೆರೆ ತಾಲ್ಲೂಕಿನಲ್ಲಿ 5, ಹರಿಹರ ಹಾಗೂ ಚನ್ನಗಿರಿ ತಾಲ್ಲೂಕಿನ ತಲಾ ಒಬ್ಬರಲ್ಲಿ ಸೋಂಕು ಪತ್ತೆಯಾಗಿದೆ. 165 ಸಕ್ರಿಯ ಪ್ರಕರಣಗಳಿವೆ.

# ಅನ್ನದಾತನಿಗೆ 5 ಸಾವಿರ ಮಾಸಾಶನ ನೀಡಬೇಕು

**ಹರಪನಹಳ್ಳಿ**

ಹರಪನಹಳ್ಳಿ, ಸೆ.15- ವಿವಿಧ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ಕರ್ನಾಟಕ ರಾಜ್ಯ ರೈತ ಸಂಘದ ತಾಲ್ಲೂಕು ಘಟಕದ ಕಾರ್ಯಕರ್ತರು ಪಟ್ಟಣದಲ್ಲಿ ಬುಧವಾರ ಪ್ರತಿಭಟನೆ ನಡೆಸಿ ತಹಶೀಲ್ದಾರ್ ಅವರಿಗೆ ಮನವಿ ಪತ್ರ ಸಲ್ಲಿಸಿದರು.

ಈ ವೇಳೆ ರೈತ ಸಂಘದ ರಾಜ್ಯ ಪ್ರಧಾನ ಕಾರ್ಯದರ್ಶಿ ಬಣಕಾರ ಕೆಂಪರಾಜು ಮಾತನಾಡಿ, ಅನೇಕ ವರ್ಷಗಳಿಂದ ಸರ್ಕಾರಿ, ಬಗರ್ ಹುಕ್ಕುಂ ಜಮೀನುಗಳನ್ನು ಅಕ್ರಮವಾಗಿ ಸಾಗುವಳಿ ಮಾಡುತ್ತಾ ಬಂದಂತಹ ರೈತ ಫಲಾನುಭವಿಗಳಿಗೆ ಪಟ್ಟಾ, ಪಹಣಿ ಕೂಡಲೇ ವಿತರಿಸಬೇಕು. ರೈತರು ಬೆಳೆದಂತಹ ಬೆಳೆಗಳಿಗೆ ಬೆಂಬಲ ಬೆಲೆಗಿಂತ ವೈಜ್ಞಾನಿಕ ಬೆಲೆ ಕೊಡಬೇಕು, ಅಲ್ಲಿಯವರೆಗೂ ರೈತರು ಮಾಡಿರುವಂತಹ ಸಂಪೂರ್ಣ ಸಾಲ ಮನ್ನಾ ಮಾಡಬೇಕು.

ಭೂ ಸುಧಾರಣಾ ಕಾಯ್ದೆ 12 ಮತ್ತು 3ನ್ನು ಕೈ ಬಿಡಬೇಕು, ವಿದ್ಯುತ್ ಖಾಸಗೀಕರಣ ಬೇಡ, ರೈತರ ಪಂಪ್ ಸೆಟ್‌ಗಳಿಗೆ 14 ತಾಸು ಉಚಿತ 3 ಫೇಸ್ ವಿದ್ಯುತ್ ಕೊಡಬೇಕು, ಅನ್ನದಾತನಿಗೆ ಮಾಸಿಕ 5 ಸಾವಿರ ಮಾಸಾಶನ (2ನೇ ಪುಟಕ್ಕೆ)

# ಪ್ರಧಾನಿ ಜನ್ಮದಿನಕ್ಕೆ ರಕ್ತ ಪತ್ರದ ಶುಭಾಶಯ



ದಾವಣಗೆರೆ, ಸೆ.15- ಸೆಪ್ಟೆಂಬರ್ 17 ರಂದು ಇರುವ ಪ್ರಧಾನಿ ನರೇಂದ್ರ ಮೋದಿ ಅವರ ಹುಟ್ಟುಹಬ್ಬವನ್ನು ರಾಷ್ಟ್ರೀಯ ನಿರುದ್ಯೋಗ ದಿನಾಚರಣೆ ಹಾಗೂ ರಕ್ತದಲ್ಲಿ ಮೋದಿಯವರಿಗೆ ಪತ್ರ ಬರೆಯುವ ಮೂಲಕ ಅವರ ಹುಟ್ಟುಹಬ್ಬಕ್ಕೆ ಶುಭಾಶಯ ಕೋರುವ ರಕ್ತ ಪತ್ರ ಕ್ರಾಂತಿ ಎಂಬ ವಿಶಿಷ್ಟ ರೀತಿಯ ಪ್ರತಿಭಟನೆಯನ್ನು ರಾಜ್ಯ ಯುವ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಸೈಯದ್ ಖಾಲಿದ್ ನೇತೃತ್ವದಲ್ಲಿ ನಗರದ ಕೇಂದ್ರ ಅಂಚೆ ಕಚೇರಿ ಮುಂಭಾಗ ನಡೆಸಲಾಯಿತು.

ಈ ಸಂದರ್ಭದಲ್ಲಿ ಮಾತನಾಡಿದ ಸೈಯದ್ ಖಾಲಿದ್, ಪ್ರಧಾನಿ ಮೋದಿ 2014ರ ಲೋಕಸಭಾ ಚುನಾವಣಾ ಸಮಯದಲ್ಲಿ ದೇಶದ ಯುವಕರಿಗೆ ಪ್ರತಿ ವರ್ಷ ಎರಡು ಕೋಟಿ ಉದ್ಯೋಗ ಸೃಷ್ಟಿಸುವ ಭರವಸೆ ನೀಡಿದ್ದರು. ಇಲ್ಲಿಗೆ ಏಳು ವರ್ಷವಾಗಿದ್ದು, 14 ಕೋಟಿ ಉದ್ಯೋಗ ಸೃಷ್ಟಿ ಮಾಡಬೇಕಾಗಿತ್ತು. ಆದರೆ ಉದ್ಯೋಗ ಸೃಷ್ಟಿ ಮಾಡದೆ ಉದ್ಯೋಗವನ್ನು ಸಹ ಕಿತ್ತುಕೊಳ್ಳುತ್ತಿದ್ದು, ದೇಶದ ಯುವಕರನ್ನು ಬೀದಿಗೆ ತಂದು ನಿಲ್ಲಿಸಿದ್ದಾರೆ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಕೆಪಿಸಿಸಿ ವಕ್ತಾರ ಡಿ. ಬಸವರಾಜ್ ಮಾತನಾಡಿ, ಪ್ರಧಾನಿ ಮೋದಿ ಅವರು ದೇಶದ ಜನತೆಗಾಗಿ ಆಡಳಿತ ನಡೆಸುತ್ತಿಲ್ಲ. ಅದರ ಬದಲಾಗಿ ಕೇವಲ ಅದಾನಿ, ಅಂಬಾನಿ ಎಂಬ ಇಬ್ಬರು ಉದ್ಯಮಿಗಳಿಗಾಗಿ ಅಧಿಕಾರ ನಡೆಸುತ್ತಿದ್ದು, 60 ವರ್ಷ ಕಾಂಗ್ರೆಸ್ ಮಾಡಿದ ಸಂಪತ್ತುಗಳನ್ನು ಮಾರಾಟ ಮಾಡುತ್ತಾ ಮನಸೋ ಇಚ್ಛೆ ಅಧಿಕಾರ ನಡೆಸುತ್ತಿದ್ದಾರೆ ಎಂದು ಕಿಡಿಕಾರಿದರು.

ಜಿಲ್ಲಾ ಪ್ರಧಾನ (2ನೇ ಪುಟಕ್ಕೆ)


## ಪ್ರಥಮ ವರ್ಷದ ಪುಣ್ಯಸ್ಮರಣೆ



**ದಿ|| ಶ್ರೀ ಬಿ.ಎಸ್. ವೆಂಕಟೇಶ್‌ರವರು**

ಪ್ರಥಮ ದರ್ಜೆ ಸಹಾಯಕರು, ಮಹಾನಗರ ಪಾಲಿಕೆ, ದಾವಣಗೆರೆ.

*ಜನನ : 16.01.1973* *ಮರಣ : 16.09.2020*

ನೀವು ನಮ್ಮನ್ನಗಲಿ ಇಂದಿಗೆ ವರ್ಷವಾಯಿತು. ಪರಮಾತ್ಮನು ನಿಮ್ಮ ಪವಿತ್ರ ಆತ್ಮಕ್ಕೆ ಚಿರಶಾಂತಿ ನೀಡಲೆಂದು ಪ್ರಾರ್ಥಿಸುತ್ತೇವೆ. ಸದಾ ನಿಮ್ಮ ಸ್ಮರಣೆ ಹಾಗೂ ನೀವು ಹಾಕಿಕೊಟ್ಟ ಮಾರ್ಗದರ್ಶನದಲ್ಲಿ ಮುನ್ನಡೆಯುತ್ತಿರುವ

ದುಃಖತಪ್ತ ಕುಟುಂಬ ವರ್ಗ

ಶ್ರೀಮತಿ ರುದ್ರಮ್ಮ ಮತ್ತು ಮಕ್ಕಳು, ಸೊಸೆಯಂದಿರು, ಅಳಿಯಂದಿರು ಹಾಗೂ ಮೊಮ್ಮಕ್ಕಳು

ಸಹೋದರರಾದ :

✦ ಶ್ರೀನಿವಾಸ ಬಿ.ಎಸ್. ✦ ಕೃಷ್ಣ ಬಿ.ಎಸ್. ✦ ಮಾರುತಿ ಬಿ.ಎಸ್.

**ಬಾಡಿಗೆಗೆ**
ನಗರದ ಕೆ.ಬಿ. ಬಡಾವಣೆ 2ನೇ ಕ್ರಾಸ್ ಗುಳ್ಳಮ್ಮ ಪಾರ್ಕ್-ನಾಯ್ಡು ಹೋಟೆಲ್ ಸಮೀಪ 3 BHK ಮನೆ ಬಾಡಿಗೆಗಿದೆ. ವಾಸಕ್ಕೆ, PG ನಡೆಸಲು, ಆಫೀಸ್, ಎಲೆಕ್ಟ್ರಾನಿಕ್ಸ್ ಸರ್ವೀಸ್ ಸೆಂಟರ್ ನಡೆಸಲು ಯೋಗ್ಯವಾಗಿರುತ್ತದೆ. ಸಂಪರ್ಕಿಸಿ.
98441-88770

**ಮನೆ ಬಾಡಿಗೆಗೆ/ಲೀಸ್‌ಗಿದೆ**
2 ಬೆಡ್‌ರೂಂ, ಕಾರ್ಪೊರೇಷನ್ ಹಾಗೂ ಬೋರ್‌ವೆಲ್ ನೀರಿನ ಸೌಲಭ್ಯವಿರುವ, ವಾಸ್ತು ಪ್ರಕಾರ ಕಟ್ಟಿರುವ ಸುಸಜ್ಜಿತ 2ನೇ ಮಹಡಿ ಮನೆ ನಂ.1890/23, 4ನೇ ಮೇನ್, ಎಲ್‌ಐಸಿ ಕಾಲೋನಿ ವಿದ್ಯಾನಗರ, ನೂತನ ಕಾಲೇಜ್ ಹಿಂಭಾಗ ದಾವಣಗೆರೆ ಇಲ್ಲಿ ಬಾಡಿಗೆಗೆ/ಲೀಸ್‌ಗಿದೆ. ಸಂಪರ್ಕಿಸಿ
93410 12022

**ಹೋಟೆಲ್ ಕ್ಲೀನಿಂಗ್ ಕೆಲಸಕ್ಕೆ ಮಹಿಳೆಯರು ಬೇಕಾಗಿದ್ದಾರೆ**
ಸಂಬಳ : 6,000 ರೂ.
ಸಮಯ : ಬೆಳಿಗ್ಗೆ 9 ರಿಂದ 5
ಮೊ : 82966 72274

**ಸಿದ್ದವೀರಪ್ಪ ಬಡಾವಣೆ ಸೈಟುಗಳು ಮಾರಾಟಕ್ಕಿವೆ**
ಸಿದ್ದವೀರಪ್ಪ ಬಡಾವಣೆ ಉತ್ತರ 30x40 ಅಕ್ಕ-ಪಕ್ಕ, ದಕ್ಷಿಣ 30x50, ಆಂಜನೇಯ ಬಡಾವಣೆ ಉತ್ತರ 30x40, S.S. Mall ಎದುರು ರಸ್ತೆ, ದಕ್ಷಿಣ 30x39 ಸೈಟುಗಳು ಮಾರಾಟಕ್ಕೆ ವಿಚಾರಿಸಿ:
ಐಗೂರು ವಿಜಯಕುಮಾರ್ 99457 02495

**ಕೆಲಸಕ್ಕೆ ಬೇಕಾಗಿದ್ದಾರೆ**
ಸೆರಾಕೇರ್ HTB Health Tech ನಲ್ಲಿ ಕೆಲಸ ನಿರ್ವಹಿಸಲು ಆಸಕ್ತ ಯುವತಿಯರು ಮತ್ತು ಮಹಿಳೆಯರು ಬೇಕಾಗಿದ್ದಾರೆ. 6 ತಿಂಗಳ ತರಬೇತಿಯೊಂದಿಗೆ ಆಕರ್ಷಕ ವೇತನ ಸಿಗುತ್ತದೆ.
ವಿದ್ಯಾರ್ಹತೆ: 8th, 9th, 10th, & 1st, IInd PUC, Any Degree , pass or fail
ವಯೋಮಿತಿ: 18 ರಿಂದ 35 ವರ್ಷ
81399 87715, 72598 75931
(ದಾವಣಗೆರೆ ನಗರ ಪ್ರದೇಶದವರಿಗೆ ಮೊದಲ ಆದ್ಯತೆ)

**ಬೇಕಾಗಿದ್ದಾರೆ**
ಮೆಡಿಹೌಸ್ ಔಷಧಿ ಅಂಗಡಿಯಲ್ಲಿ ಕೆಲಸ ಮಾಡಲು ಹುಡುಗರು ಬೇಕಾಗಿದ್ದಾರೆ.
PUC or Any Degree.
ವಿಳಾಸ :
ಕಾವೇರಿ ಮೆಡಿಹೌಸ್ ಪ್ರೈ.ಲಿ.
ಚೇತನಾ ಹೋಟೆಲ್ ಹತ್ತಿರ, ದಾವಣಗೆರೆ-577 002.

**ಕುಂದುವಾಡ ಕೆರೆ ಪಕ್ಕ ಸೈಟುಗಳು ಮಾರಾಟಕ್ಕಿವೆ**
ಕುಂದುವಾಡ ಕೆರೆ ಪಕ್ಕ ಕುಂದುವಾಡ ರಸ್ತೆ ಪೂರ್ವ 30x55, 30x47, 25x47, ಪಶ್ಚಿಮ 30x55, 30x40, ಮಹಾಲಕ್ಷ್ಮಿ ಲೇಔಟ್ ಶಿವಗಂಗೆ ಕಲ್ಯಾಣ ಮಂಟಪ ಹಿಂಭಾಗ, ಪೂರ್ವ ಮತ್ತು ಪಶ್ಚಿಮ 30x40, ದಕ್ಷಿಣ 30x50, ಉತ್ತರ 40x45.
ಐಗೂರು ವಿಜಯಕುಮಾರ್ 99457 02495

**ಬಿಲ್ಡಿಂಗ್ ಮಾರಾಟಕ್ಕಿದೆ**
ದಾವಣಗೆರೆ ನಗರದ ಕೆ.ಆರ್. ರಸ್ತೆಗೆ ಹೊಂದಿಕೊಂಡಂತೆ ಎಸ್.ಎಸ್. ಆಸ್ಪತ್ರೆ ಪಕ್ಕ ನೀರಿನ ಟ್ಯಾಂಕ್ ಮುಂಭಾಗ ಮಹಾನಗರ ಪಾಲಿಕೆ ಡೋರ್ ನಂಬರ್‌ವುಳ್ಳ ಕಟ್ಟಡ ಅಳತೆ 11½×110ವುಳ್ಳ ಎರಡು ಅಂತಸ್ತಿನ ಬಿಲ್ಡಿಂಗ್ ಮಾರಾಟಕ್ಕಿದೆ. ಕೊಳ್ಳಲಿಚ್ಛಿಸುವವರು ಸಂಪರ್ಕಿಸಿ :
97439 78754

**ಸೈಟುಗಳು ಮಾರಾಟಕ್ಕಿವೆ**
(1) 70x62 South-West Corner ಡಾಲರ್ಸ್ ಕಾಲೋನಿಯಲ್ಲಿ. (2) 60x40 North ಸಿದ್ದವೀರಪ್ಪ ಬಡಾವಣೆಯಲ್ಲಿ. (3) 30x44 North, 40 ಅಡಿ ರೋಡಿಗಿದೆ ಜೆ.ಹೆಚ್. ಬಡಾವಣೆಯಲ್ಲಿ. (4) 30x40 North ವಿನಾಯಕ ಬಡಾವಣೆಯಲ್ಲಿ.
ಐನಳ್ಳಿ ಚನ್ನಬಸಪ್ಪ, ಏಜೆಂಟ್
99166 12110

**ಮಾರಾಟಕ್ಕಿದೆ**
ಹೋಟೆಲ್ ಹಾಗೂ ಕಿರಾಣಿ ಸ್ಟೋರ್‌ಗೆ ಬೇಕಾಗುವ ಸಾಮಾನುಗಳು ಮಾರಾಟಕ್ಕಿವೆ, ಹಾಗೂ ಮಳಿಗೆ ಬಾಡಿಗೆಗಿದೆ.
72049 21532

**ಡಾಕ್ಟರ್ ಬೇಕಾಗಿದ್ದಾರೆ**
ಶಿಕಾರಿಪುರದ ಕ್ಲಿನಿಕ್‌ನಲ್ಲಿ ಕಾರ್ಯ ನಿರ್ವಹಿಸಲು MBBS/BAMS ಓದಿರುವ ಡಾಕ್ಟರ್ ಬೇಕಾಗಿದ್ದಾರೆ
Attractive Salary +Incentives.
Contact :
78943 99340, 99802 02254

**ಸ್ಟ್ಯಾಫ್ ಬೇಕಾಗಿದ್ದಾರೆ**
ಶಿಕಾರಿಪುರದ ಕ್ಲಿನಿಕ್‌ನಲ್ಲಿ ಕಾರ್ಯ ನಿರ್ವಹಿಸಲು ಸ್ಟ್ಯಾಫ್ ಬೇಕಾಗಿದ್ದಾರೆ. ನರ್ಸಿಂಗ್ ಆದವರಿಗೆ ಆದ್ಯತೆ.
Attractive Salary +Incentives.
Contact :
78943 99340, 99802 02254

**ಬೇಕಾಗಿದ್ದಾರೆ**
ಲಾಡ್ಜ್ ನಲ್ಲಿ ಹಗಲು ಮತ್ತು ರಾತ್ರಿ ಪ್ರತ್ಯೇಕ ಪಾಳೆಯಗಳಲ್ಲಿ ರೂಂ ಬಾಯ್ ಮತ್ತು ಸೂಪರ್ ವೈಸರ್ ಕೆಲಸಕ್ಕೆ ಬೇಕಾಗಿದ್ದಾರೆ. ಸಂಪರ್ಕಿಸಿ :
63639 54459

**ಸೈಟುಗಳು ಮಾರಾಟಕ್ಕಿವೆ**
ವಿದ್ಯಾನಗರ, ಡಾಲರ್ಸ್ ಕಾಲೋನಿ, ಬನಶಂಕರಿ ಲೇಔಟ್‌ನಲ್ಲಿ ಸೈಟುಗಳು ಮಾರಾಟಕ್ಕಿವೆ.
30x50 East 40 ಅಡಿ ರೋಡಿಗಿದೆ.
30x50 - 30x50 West ಅಕ್ಕ-ಪಕ್ಕ.
30x40 West - 30x40, 40 ಅಡಿ ರೋಡಿಗಿದೆ
40x74 West, 60 ಅಡಿ ರೋಡಿಗಿದೆ.
ಐನಳ್ಳಿ ಚನ್ನಬಸಪ್ಪ, ಏಜೆಂಟ್
99166 12110

**ಮನೆ ಬಾಡಿಗೆಗಿದೆ**
3 ಬೆಡ್‌ರೂಂ ಹೊಂದಿರುವ ಸುಸಜ್ಜಿತ ಮನೆ ಮೊದಲನೇ ಮಹಡಿ, ಪಾರ್ಕ್ ಎದುರುಗಡೆ, 2ನೇ ಬಸ್ ಸ್ಟಾಪ್, ವಿದ್ಯಾನಗರ, ದಾವಣಗೆರೆಯಲ್ಲಿ ಬಾಡಿಗೆಗಿದೆ. (ಸಸ್ಯಹಾರಿಗಳಿಗೆ ಮಾತ್ರ)
ಸಂಪರ್ಕಿಸಿ: 98455 88889

**Looking for**
Male candidates to work in Cafe/Restaurants.
Full time. Salary 8000.
For details call us on
70198 12207

**ಬೇಕಾಗಿದ್ದಾರೆ**
ಪಟಾಕಿ ಅಂಗಡಿಯಲ್ಲಿ ಕೆಲಸ ಮಾಡಲು ಹುಡುಗರು ಬೇಕಾಗಿದ್ದಾರೆ.
ಮೊ : 98453-52367
72591-33339

**ಗೋಡೌನ್ ಬಾಡಿಗೆಗಿದೆ**
ಎ.ಪಿ.ಎಂ.ಸಿ.ಯಾರ್ಡ್ 'ಎ' ಬ್ಲಾಕ್ ನಲ್ಲಿ 75x75 ಅಡಿ ಅಳತೆಯ ಗೋಡೌನ್ ಬಾಡಿಗೆಗಿದೆ.
94833 44445
94489 23963

**WANTED**
DR. BHARGAV STEMCELL CENTER PVT. LTD*
Experienced 'B.A.M.S' duty doctor required for our upcoming clinic in Davangere.
Good Salary will be paid.
Interested Doctor kindly Contact
Mr. Shivanand : 9167165684
or mail your resume at
DRBHARGAVSMECELL@GMAIL.COM

**ಶಿಕ್ಷಕ/ಶಿಕ್ಷಕಿಯರು ಬೇಕಾಗಿದ್ದಾರೆ**
"ರಶ್ಮಿ" ಹೆಣ್ಣು ಮಕ್ಕಳ ವಸತಿಯುತ ಶಾಲೆ ದಾವಣಗೆರೆ, ಕನ್ನಡ ಮಾಧ್ಯಮದಲ್ಲಿ ಬೋಧನೆ ಮಾಡಲು B.com., BSc., (CBZ) B.Ed. ವಿದ್ಯಾರ್ಹತೆಯುಳ್ಳ ಶಿಕ್ಷಕ/ಶಿಕ್ಷಕಿಯರು ಬೇಕಾಗಿದ್ದಾರೆ. ಸೂಚನೆ : ಶಿಕ್ಷಕಿಯರಿಗೆ ಉಚಿತ ಊಟ, ವಸತಿ ಸೌಲಭ್ಯವಿರುತ್ತದೆ.
99163 62288

**ಮಾರಾಟಕ್ಕೆ**
* ಮಹಾಲಕ್ಷ್ಮಿ ಲೇಔಟ್ ಸೈಟ್ (ಉತ್ತಮ್ ಚಂದ್ - ಪಶ್ಚಿಮ)35×61, * ಡಾಲರ್ಸ್ ಕಾಲೋನಿ ಸೈಟ್ (ದಕ್ಷಿಣ) 30×40, * ಶಿಕ್ಷಕರ ಬಡಾವಣೆ 2 ನೇ ಹಂತ (ದಕ್ಷಿಣ- ಆವರಗೆರೆ) 30×40,* ಸಿದ್ದವೀರಪ್ಪ ಬಡಾವಣೆ ಸೈಟ್ (ಉತ್ತರ) 30×40, * ಶಾಮನೂರು ( ಶಿವ-ಪಾರ್ವತಿ) ಸೈಟ್ (ಪೂರ್ವ) 30×34, ಶಾಮನೂರು (ಆಶೀರ್ವಾದ ಲೇಔಟ್) ಸೈಟ್ (ಪೂರ್ವ)30×55,
7899636597, 9916525828

**ಕುರಿಗಳು ಮಾರಾಟಕ್ಕೆ ಇವೆ**
ದಾವಣಗೆರೆ ನಗರದಿಂದ 11 ಕಿ.ಮೀ. ದೂರದಲ್ಲಿರುವ ಫಾರಂನಲ್ಲಿ ಒಂದೂವರೆ ವರ್ಷದ ಕುರಿಗಳು ಮಾರಾಟಕ್ಕಿವೆ.
ಸಂಪರ್ಕಿಸಿ.
96323 10045

**ಬಾಡಿಗೆಗೆ ಇದೆ**
40 HP ವಿದ್ಯುತ್ ಇರುವ 60x60 ಅಳತೆಯ ಕಮರ್ಷಿಯಲ್ ಶೆಡ್ ಕುಂದುವಾಡ to P.B. ರಸ್ತೆ, ಹೊಂಡಾ ಕಾರ್ ಶೋ ರಂ ಎದುರು 40 ಅಡಿ ರಸ್ತೆಗೆ ಅಶ್ವಿನಿ ನರ್ಸಿಂಗ್ ಹೋಂ ಎದುರು ಭಾಗ ಬಾಡಿಗೆಗೆ ಇದೆ. ಸಂಪರ್ಕಿಸಿ :
ಮಧು : 98447 11299

**ಮನೆಗಳು ಮಾರಾಟಕ್ಕಿವೆ**
M.C.C. 'A' Block ಪಶ್ಚಿಮ-ದಕ್ಷಿಣ ಕಾರ್ನರ್ 44x60, M.C.C. 'B' Block, ದಕ್ಷಿಣ 44x60, 22x60, (ಮೇಲೆ ಕೆಳಗೆ ಮನೆ) ನೂತನ ಕಾಲೇಜ್ ರಸ್ತೆ ಪಶ್ಚಿಮ-ದಕ್ಷಿಣ ಕಾರ್ನರ್ 45x70, ಕೆಳಗೆ 4 BHK ಮೇಲೆ 2BHK ಎರಡು ಮತ್ತು Single BHK ಎರಡು.
ಐಗೂರು ವಿಜಯಕುಮಾರ್ 99457 02495

**State Bank of India 'ಜನ್‌ಧನ್ ಖಾತೆ' ಮಾಡಲಾಗುತ್ತದೆ**
(10 ವರ್ಷ ಮೇಲಿನವರಿಗೆ)
Old B.S. ಚನ್ನಬಸಪ್ಪ & ಸನ್ಸ್ ಹಿಂಭಾಗ, # 264/1, ಮಹಾರಾಜ ಪೇಟೆ, ವಿಠ್ಠಲ ಮಂದಿರ ಹತ್ತಿರ, ದಾವಣಗೆರೆ.
ಸಂಪರ್ಕಿಸಿ : 99806 10005

**ಬೇಕಾಗಿದ್ದಾರೆ**
ಟೆಲಿಕಾಲಿಂಗ್ ಕೆಲಸಕ್ಕೆ ಮಹಿಳಾ ಅಭ್ಯರ್ಥಿಗಳು ಬೇಕಾಗಿದ್ದಾರೆ.
ವಿದ್ಯಾರ್ಹತೆ : 10th & above.
Salary + Incentive
ಹಾಗೂ ವೈಯಕ್ತಿಕ ವ್ಯವಹಾರ, ಗೃಹ ಸಾಲಗಳಿಗಾಗಿ ಸಂಪರ್ಕಿಸಿ:
ಮೊಬೈಲ್ : 76248 68848, 91085 94778

**SITE FOR SALE (HARIHAR)**
East facing 30x40 ( 5 sites )
West facing 30x40 ( 5 sites )
Opposite green city Harihar
Beside MKET CBSE school , Harihar
63628 20412, 99459 88776
94490 37488

**ಗೃಹ ಸಾಲಗಳಿಗಾಗಿ**
ಮನೆ ಕಟ್ಟಲು, ಮನೆ ಖರೀದಿ, ಸೈಟ್ ಖರೀದಿ, ಕಟ್ಟಿರುವ ಮನೆಗೆ ಮಾರ್ಟ್‌ಗೇಜ್ ಸಾಲಗಳಿಗಾಗಿ
ಸಂಪರ್ಕಿಸಿ :
81472 61158

**ಭೂಮಿಕಾ ಮ್ಯಾಟ್ರಿಮೊನಿ**
ಲಿಂಗಾಯಿತ ವಧು-ವರರ ಕೇಂದ್ರ
H.O : Near Coffee day, Nutana Collage Road, Vidyanagara, 2nd main, Davangere
77603 16576
90080 55813

**ಶಿಕ್ಷಕಿಯರು ಬೇಕಾಗಿದ್ದಾರೆ**
Teacher's Wanted
D.Ed., Bsc.,B.Ed., B.A., B.Com., Bsc., NTC
TAHSEEN CONVENT
Razaul Mustafa Nagar, Davangere.
93411 19195, 99800 32237

**ನೀರಿನ ಲೀಕೇಜ್**
(ವಾಟರ್ ಪ್ರೂಫಿಂಗ್)
ನಿಮ್ಮ ಮನೆ ಮತ್ತಿತರೆ ಕಟ್ಟಡಗಳ ಬಾತ್‌ರೂಂ, ಬಾಲ್ಕನಿ, ಟೆರೇಸ್, ನೀರಿನ ತೊಟ್ಟಿ, ಗೋಡೆ ಬಿರುಕು, ನೀರಿನ ಟ್ಯಾಂಕ್, ಎಲ್ಲಾ ರೀತಿಯ ನೀರಿನ ಲೀಕೇಜ್‌ಗಳಿಗೆ ಸಂಪರ್ಕಿಸಿ:
ಮೊ. 9538777582
ಕೆಲಸ 100% ಗ್ಯಾರಂಟಿ.

**AVOID MOSQUITOES**
Mosquito Net For Doors & Windowes. Design Boards, ACP, MDF Available.
SRI GOWRI ENTERPRISES
# 7, 4th Cross, Karur Industrial Area. Davangere-6
72049 94628


## 8ನೇ ವರ್ಷದ ಪುಣ್ಯಸ್ಮರಣೆ



**ದೇಹದಾನಿ ಆರ್. ಪ್ರಮೀಳಮ್ಮ**
ಸ್ಟ್ಯಾಂಪ್ ವೆಂಡರ್
ನೀವು ನಮ್ಮನ್ನಗಲಿ ಇಂದಿಗೆ (16.09.2021) 8 ವರ್ಷಗಳಾದವು.
ಸದಾ ನಿಮ್ಮ ನೆನಪಿನಲ್ಲಿರುವ.
ಮಕ್ಕಳಾದ : ಶ್ರೀಮತಿ ಗೀತಾ ಹೆಚ್.ಯು.ರಾಮಸ್ವಾಮಿ, ಡಿಸಿಸಿ ಬ್ಯಾಂಕ್, ದಾವಣಗೆರೆ.
ಮಾರುತಿ ಉದ್ದಾರ್, ಡಿ.ಕೆ. ಸಂಗಮೇಶ್ ಎಲಿಗಾರ್, ಸ್ಟ್ಯಾಂಪ್ ವೆಂಡರ್
ಶ್ರೀಮತಿ ಶಾಂತ ಶಿವರಾಜ ಗವಾಯಿಗಳು


**ಟ್ಯಾಂಕ್ ಕ್ಲೀನಿಂಗ್**
ಮನೆಯ ನೀರಿನ ತೊಟ್ಟಿ, ಟ್ಯಾಂಕ್‌ಗಳು ಗಲೀಜಾಗಿದ್ದರೆ ಯಂತ್ರಗಳನ್ನು ಬಳಸಿ ನಾವು ಕ್ಲೀನ್ ಮಾಡುತ್ತೇವೆ. ಅತ್ಯುತ್ತಮ ಸೇವೆಗೆ ಸಂಪರ್ಕಿಸಿ
99863 61250
91132 85992

**ಮದ್ಯವ್ಯಸನಿಗೆ ಅರಿವಿಲ್ಲದಂತೆ ಮದ್ಯ ಸೇವನೆ ಬಿಡಿಸಿರಿ**
ಪ್ರತಿ ತಿಂಗಳು 7ಮತ್ತು 21ನೇ ತಾರೀಖು ಜನತಾ ಡೀಲಕ್ಸ್ ಲಾಡ್ಜ್, ಕೆ.ಎಸ್.ಆರ್.ಟಿ.ಸಿ. ಹೊಸ ಬಸ್ ಸ್ಟ್ಯಾಂಡ್ ಎದುರು, ದಾವಣಗೆರೆ.
4 ಮತ್ತು 18ರಂದು ಕಾವೇರಿ ಲಾಡ್ಜ್, ಪೂನಾ - ಬೆಂಗಳೂರು ರೋಡ್, ಹಾವೇರಿ.
ಅಸ್ತಮಾ, ಕೀಲು ನೋವು
ಡಾ॥ ಎಸ್.ಎಂ. ಸೇಠಿ. ಫೋನ್ : 96322 95561
ಸಮಯ: ಬೆಳಿಗ್ಗೆ 10ರಿಂದ ಮಧ್ಯಾಹ್ನ 2 ರವರೆಗೆ.

**ಡಿಸ್ಕೌಂಟ್ ಸೇಲ್**
ವಿವಿಧ ಇಂಟರ್ ನ್ಯಾಷನಲ್ ಬ್ರಾಂಡೆಡ್ ಐಟಂಗಳು ಶೇ. 70 ರವರೆಗೆ ಡಿಸ್ಕೌಂಟ್‌ನಲ್ಲಿ ದೊರೆಯುತ್ತವೆ.
ಸ್ಟಾಕ್ ಇರುವವರೆಗೆ ಮಾತ್ರ. ತ್ವರೆ ಮಾಡಿ.
ಉದಯ ಸೂಪರ್ ಬಜಾರ್
ವಾಣಿ ರೈಸ್ ಮಿಲ್, ಹದಡಿ ರಸ್ತೆ, ದಾವಣಗೆರೆ.

**ನೇರ ಪರೀಕ್ಷೆಗಳು**
ಉನ್ನತ ಶಿಕ್ಷಣಕ್ಕೆ ಮತ್ತು ಸರ್ಕಾರಿ ಕೆಲಸಕ್ಕೆ ಉಪಯೋಗ SSLC, PUC, Technical & Non-Technical Courses, Pharmacy & BHMS (Government & Private College)
ಶ್ರೀ ಸಾಯಿ ಕರೆಸ್ಪಾಂಡೆನ್ಸ್ ಕಾಲೇಜ್
ಸೋಮು ಮೆಡಿಕಲ್ಸ್ ಮೇಲೆ, ಗಣೇಶ ದೇವಸ್ಥಾನದ ಹಿಂಭಾಗ, ರಾಂ ಅಂಡ್ ಕೋ ಸರ್ಕಲ್, ದಾವಣಗೆರೆ.
87490 24789, 94837 64859, 87620 58369, 82173 02649, 80507 27467


**ಓದುಗರ ಗಮನಕ್ಕೆ**
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ - ವಸ್ತು ಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿ ಯಾಗುವುದಿಲ್ಲ. -ಜಾಹೀರಾತು ವ್ಯವಸ್ಥಾಪಕರು

## 12ನೇ ವರ್ಷದ ಪುಣ್ಯಸ್ಮರಣೆ



**ಶ್ರೀಮತಿ ಸುಶೀಲಮ್ಮ ಟಿ. ಬಸವರಾಜಪ್ಪ**
ಯಕ್ಕನಹಳ್ಳಿ.
ದಾವಣಗೆರೆ ಜಿಲ್ಲಾ ಪಂಚಾಯ್ತಿ ಸದಸ್ಯರು, ಕುಂದೂರು ಕ್ಷೇತ್ರ
ಜನನ : 25.12.1958 - ಮರಣ : 16.09.2009
ನೀವು ನಮ್ಮನ್ನಗಲಿ ಇಂದಿಗೆ ಹನ್ನೆರಡು ವರ್ಷಗಳಾದವು.
ಸದಾ ನಿಮ್ಮ ಸವಿನೆನಪಿನಲ್ಲಿರುವ.....
ದಿ॥ ಶ್ರೀಮತಿ ಸಿದ್ದಮ್ಮ, ದಿ॥ ತಿಮ್ಲಾಪುರದ ಸಿದ್ದಪ್ಪನವರ ಮಕ್ಕಳು, ಸೊಸೆಯಂದಿರು ಹಾಗೂ ಅಳಿಯಂದಿರು, ಮೊಮ್ಮಕ್ಕಳು
**ಶ್ರೀ ಬಸವೇಶ್ವರ ರೈಸ್ ಇಂಡಸ್ಟ್ರೀಸ್**
ಯಕ್ಕನಹಳ್ಳಿ ಮತ್ತು ಮಲೇಬೆನ್ನೂರು.
ದಿ॥ ಶ್ರೀ ಹೊಸಮನಿ ವೀರಭದ್ರಪ್ಪ ಮತ್ತು ಸಹೋದರರು ಹಾಗೂ ಹೊಸಮನಿ ವಂಶಸ್ಥರು, ಬೆಳ್ಳೂಡಿ.

## ವೈಕುಂಠ ಸಮಾರಾಧನೆ



**ಡಾ॥ ಟಿ.ಎನ್. ನಾಯ್ಕ** ಎಂ.ಡಿ.
ಜನನ: 10.05.1933 ನಿವೃತ್ತ ಜಿಲ್ಲಾ ಸರ್ಜನ್ ಮರಣ: 04.09.2021
ಇವರು ನಿಧನರಾದ ಪ್ರಯುಕ್ತ 'ವೈಕುಂಠ ಸಮಾರಾಧನೆ'ಯನ್ನು ದಿನಾಂಕ 16.09.2021ನೇ ಗುರುವಾರ ಮಧ್ಯಾಹ್ನ 12.30ಕ್ಕೆ ಶ್ರೀಮತಿ ಶಾರದಾಬಾಯಿ ಡಾ॥ ಟಿ.ಎನ್. ನಾಯ್ಕ ಸಭಾಭವನ, ಸರಸ್ವತಿ ನಗರ, ದಾವಣಗೆರೆ ಇಲ್ಲಿ ನೆರವೇರಿಸಲು ಗುರು-ಹಿರಿಯರು ನಿಶ್ಚಯಿಸಿರುತ್ತಾರೆ. ತಾವುಗಳು ಆಗಮಿಸಿ ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಲು ವಿನಂತಿ.
ಇಂತಿ ದುಃಖತಪ್ತರು :
ಶ್ರೀಮತಿ ಟಿ.ಎನ್. ನಾಗರತ್ನ ಮತ್ತು ಬಿ. ದಯಾಳು
ಶ್ರೀಮತಿ ಟಿ.ಎನ್. ಧನಲಕ್ಷ್ಮಿ ಮತ್ತು ಡಾ॥ ಪಾಂಡುರಂಗ ನಾಯ್ಕ
ಶ್ರೀಮತಿ ಅನಿತಾ ಮತ್ತು ಟಿ.ಎನ್. ಸುರೇಶ
ಶ್ರೀಮತಿ ಸುಜಾತ ಮತ್ತು ಟಿ.ಎನ್. ರವಿ ಹಾಗೂ ಮೊಮ್ಮಕ್ಕಳು, ಮರಿಮೊಮ್ಮಕ್ಕಳು, ಕುಟುಂಬಸ್ಥರು ಮತ್ತು ಬಂಧು-ಮಿತ್ರರು
ವಿ.ಸೂ: ಆಹ್ವಾನ ಪತ್ರಿಕೆ ತಲುಪದೇ ಇದ್ದವರು ಇದನ್ನೇ ಆಹ್ವಾನ ಎಂದು ಭಾವಿಸಿ ಆಗಮಿಸಬೇಕಾಗಿ ಕೋರಿದೆ.

# ಹಿಂದಿ ದಿವಸ್ ವಿರೋಧಿಸಿ ಪ್ರತಿಭಟನೆ



**ಹರಪನಹಳ್ಳಿ**

ಹರಪನಹಳ್ಳಿ, ಸೆ.15- ಭಾರತ ಸರ್ಕಾರ ಪ್ರತಿ ವರ್ಷ ಹಮ್ಮಿಕೊಳ್ಳುವ ಹಿಂದಿ ದಿವಸ್ ಆಚರಣೆಯನ್ನು ವಿರೋಧಿಸಿ ಕರ್ನಾಟಕ ರಕ್ಷಣಾ ವೇದಿಕೆಯ ತಾಲ್ಲೂಕು ಘಟಕದ ಕಾರ್ಯಕರ್ತರು ಪಟ್ಟಣದಲ್ಲಿ ಪ್ರತಿಭಟನೆ ನಡೆಸಿದರು.

ಭಾರತೀಯ ಸ್ಟೇಟ್ ಬ್ಯಾಂಕ್ ಹಾಗೂ ಕೆನರಾ ಬ್ಯಾಂಕುಗಳ ಎದುರಿಗೆ ಪ್ರತಿಭಟನೆ ನಡೆಸಿ, ಬ್ಯಾಂಕುಗಳ ವ್ಯವಸ್ಥಾಪಕರಿಗೆ ಮನವಿ ಪತ್ರ ಸಲ್ಲಿಸಿದರು.

ಕರ್ನಾಟಕ ರಕ್ಷಣಾ ವೇದಿಕೆ ತಾಲ್ಲೂಕು ಘಟಕದ ಅಧ್ಯಕ್ಷ ಬಸವರಾಜ ಹುಲಿಯಪ್ಪನವರ್ ಮಾತನಾಡಿ, ಬ್ಯಾಂಕಿನ ಎಲ್ಲಾ ಸೇವೆಗಳನ್ನು ಕನ್ನಡದಲ್ಲಿಯೇ ನೀಡಬೇಕು. ಕನ್ನಡದಲ್ಲಿಯೇ ಬ್ಯಾಂಕಿನಲ್ಲಿ ವ್ಯವಹಾರ ನಡೆಸಲು ಸುಲಭವಾಗುವಂತೆ ಕರ್ನಾಟಕದವರನ್ನೇ ಬ್ಯಾಂಕಿನ ಉದ್ಯೋಗಿಗಳನ್ನಾಗಿ ನೇಮಿಸಬೇಕು. ಕರ್ನಾಟಕದ ಉದ್ಯೋಗಗಳು ಕನ್ನಡಿಗರಿಗೇ ಲಭಿಸಬೇಕು ಎಂದು ಒತ್ತಾಯಿಸಿದರು.

ಜಿಲ್ಲಾ ಸಂಚಾಲಕ ನಂದೀಶ್ ಮಾತನಾಡಿ, ಚಲನ್, ಖಾತೆ ಪುಸ್ತಕ, ಚೆಕ್ ಮತ್ತು ಎಲ್ಲಾ ಅರ್ಜಿ ನಮೂನೆಗಳೂ ಕನ್ನಡದಲ್ಲಿಯೇ ಲಭ್ಯವಿರುವಂತೆ ನೋಡಿಕೊಳ್ಳಬೇಕು ಎಂದು ಆಗ್ರಹಿಸಿದರು.

ಕರವೇ ತಾಲ್ಲೂಕು ಗೌರವಾಧ್ಯಕ್ಷ ರಾಜು, ಪ್ರಧಾನ ಕಾರ್ಯದರ್ಶಿ ಪ್ರಕಾಶ್, ಸಹ ಕಾರ್ಯದರ್ಶಿ ಎಚ್. ಬಾಲಾಜಿ, ರುದ್ರಗೌಡ, ಕೃಷ್ಣಮೂರ್ತಿ, ಶಿವಕುಮಾರ ಬಾಗಳಿ, ಬಸವರಾಜ ಭಂಡಾರಿ, ಕೊಟ್ರೇಶ್, ದೊಡ್ಡ ಬಸವರಾಜ, ಭರತ್, ಗೋಪಿ, ನಾಗರಾಜ್, ದೇವರಾಜ, ಅಶೋಕ, ಕೆ. ತಿರುಮಲ, ವಕೀಲ ಸಿದ್ದೇಶ ಇನ್ನಿತರರಿದ್ದರು.

# ಬಿಜೆಪಿಗೆ ಕಾರ್ಯಕರ್ತರೇ ಶಕ್ತಿ



**ಸಂಸದ ಸಿದ್ದೇಶ್ವರ**

ಮಲೇಬೆನ್ನೂರು, ಸೆ.15- ಬಿಜೆಪಿಗೆ ಕಾರ್ಯಕರ್ತರೇ ಶಕ್ತಿಯಾಗಿದ್ದು, ಅವರ ಉತ್ಸಾಹ, ಹೋರಾಟದಿಂದಲೇ ಪಕ್ಷ ಇಷ್ಟೊಂದು ಎತ್ತರಕ್ಕೆ ಬೆಳೆದಿದೆ ಎಂದು ಸಂಸದ ಜಿ.ಎಂ. ಸಿದ್ದೇಶ್ವರ ಹೇಳಿದರು.

ಹರಿಹರ ತಾಲ್ಲೂಕು ಗ್ರಾಮಾಂತರ ಬಿಜೆಪಿ ವತಿಯಿಂದ ಭಾನುವಳ್ಳಿ ಗ್ರಾಮದಲ್ಲಿ ಇಂದು ಏರ್ಪಾಡಾಗಿದ್ದ ಬಿಜೆಪಿ ಮುಖಂಡ ಬಾರ್ಕಿ ಮಂಜಪ್ಪ ಅವರ ಸಂತಾಪ ಸಭೆಯಲ್ಲಿ ಪಾಲ್ಗೊಂಡು ಅವರು ಮಾತನಾಡಿದರು.

ಬಾರ್ಕಿ ಮಂಜಪ್ಪ ಅವರು ಕಳೆದ ಹಲವಾರು ವರ್ಷಗಳಿಂದ ಬಿಜೆಪಿ ಸಂಘಟನೆಗಾಗಿ ದುಡಿದವರು ಎಂದು ಅವರು ಮೆಚ್ಚುಗೆ ವ್ಯಕ್ತಪಡಿಸಿದರು.

ಮಂಜಪ್ಪ ಅವರ ಅಗಲಿಕೆ ಅವರ ಕುಟುಂಬಕ್ಕೆ ಅಷ್ಟೇ ಅಲ್ಲ. ಪಕ್ಷಕ್ಕೂ ನಷ್ಟ ತಂದಿದೆ ಎಂದು ಜಿಲ್ಲಾ ಬಿಜೆಪಿ ಅಧ್ಯಕ್ಷ ಹನಗವಾಡಿ ವೀರೇಶ್ ಹೇಳಿದರು.

ಜಿ.ಪಂ. ಮಾಜಿ ಸದಸ್ಯ ಬಿ.ಎಂ.ವಾಗೀಶ್ ಸ್ವಾಮಿ, ಭದ್ರಾ ಕಾಡಾ ಸದಸ್ಯ ಗೋವಿನಹಾಳ್ ರಾಜಣ್ಣ, ಜಿಲ್ಲಾ ಬಿಜೆಪಿ ಮಾಜಿ ಅಧ್ಯಕ್ಷ ಯಶವಂತ್‌ರಾವ್ ಜಾಧವ್, ದೂಡಾ ಮಾಜಿ ಅಧ್ಯಕ್ಷ ರಾಜನಹಳ್ಳಿ ಶಿವಕುಮಾರ್, ಹರಿಹರ ತಾ. ಬಿಜೆಪಿ ಅಧ್ಯಕ್ಷ ಹಿಂಡಸಘಟ್ಟ ಲಿಂಗರಾಜ್, ಮಾಜಿ ಅಧ್ಯಕ್ಷ ಕೆ.ಹೆಚ್.ನಾಗನಗೌಡ, ತಾ.ಬಿಜೆಪಿ ಪ್ರಧಾನ ಕಾರ್ಯದರ್ಶಿಗಳಾದ ಆದಾಪುರ ವೀರೇಶ್, ಹುಗ್ಗಿ ಮಹಾಂತೇಶ್, ಮುಖಂಡರಾದ ಬೆಳ್ಳೂಡಿ ಬಕ್ಕೇಶ್, ಸಾರಥಿ ಹೊನ್ನಪ್ಪ, ಕೆ.ಎನ್.ಹಳ್ಳಿಯ ಅಶೋಕ್, ಜಿಗಳಿಯ ಸಿ.ಎನ್.ಪರಮೇಶ್ವರಪ್ಪ ಮತ್ತಿತರರು ಈ ವೇಳೆ ಹಾಜರಿದ್ದರು.

ಮಾಜಿ ಶಾಸಕ ಬಿ.ಪಿ.ಹರೀಶ್, ಬಿಜೆಪಿ ಮುಖಂಡರಾದ ಸಿರಿಗೆರೆ ನಾಗನಗೌಡ, ಚಂದ್ರಶೇಖರ್ ಪೂಜಾರ್ ಅವರು ಬಾರ್ಕಿ ಮಂಜಪ್ಪ ಅವರ ನಿಧನಕ್ಕೆ ಸಂತಾಪ ಸೂಚಿಸಿದ್ದಾರೆ.

# ಜನ್ಮದಿನಕ್ಕೆ ರಕ್ತ ಪತ್ರದ ಶುಭಾಶಯ

(1ನೇ ಪುಟದಿಂದ) ಕಾರ್ಯದರ್ಶಿ ದಿನೇಶ್ ಕೆ. ಶೆಟ್ಟಿ ಮಾತನಾಡಿ, ದೇಶದಲ್ಲಿ ಯುವಕರು ಈಗಲಾದರೂ ಎಚ್ಚೆತ್ತುಕೊಂಡು ಹೋರಾಟ ಮಾಡದಿದ್ದರೆ ಮುಂದಿನ ದಿನಗಳಲ್ಲಿ ಇನ್ನೂ ತುಂಬಾ ಕಷ್ಟ ಅನುಭವಿಸಬೇಕಾಗುತ್ತದೆ. ಕೇವಲ ಯುವಕರನ್ನು ಚುನಾವಣೆಯಲ್ಲಿ ದ್ವೇಷ ಬಿತ್ತಿ ಮತ ಗಳಿಸಲು ಬಳಸಲಾಗುತ್ತದೆಯೇ ವಿನಃ ಅವರಿಗೆ ಉದ್ಯೋಗ ಸೃಷ್ಟಿ ಮಾಡುವಲ್ಲಿ ಬಿಜೆಪಿ ವಿಫಲವಾಗಿದೆ ಎಂದು ಬೇಸರ ವ್ಯಕ್ತಪಡಿಸಿದರು.

ಪ್ರತಿಭಟನೆಯಲ್ಲಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಅಯೂಬ್ ಪೈಲ್ವಾನ್, ಇಂಟಕ್ ಅಧ್ಯಕ್ಷ ಮಂಜುನಾಥ್, ಮೊಹಮ್ಮದ್ ಜಿಕ್ರಿಯಾ, ಕೆ.ಎಲ್. ಹರೀಶ್ ಬಸಾಪುರ, ವಿನಯ್, ನವೀನ್ ನಾಲವಾಡಿ, ಶಶಿಧರ್ ಪಾಟೀಲ್, ಮಹಬೂಬ್ ಬಾಷಾ, ರಾಘವೇಂದ್ರ ಗೌಡ, ಅಣ್ಣೇಶ್, ದೀಪಕ್, ಶಮಿ ದೇವರಹಟ್ಟಿ ಸೇರಿದಂತೆ ಇತರರು ಭಾಗವಹಿಸಿದ್ದರು.

# ಹೊನ್ನಾಳಿ ಪಿಕಾರ್ಡ್ ಬ್ಯಾಂಕ್ ಉಪಾಧ್ಯಕ್ಷರಾಗಿ ಹರಳಹಳ್ಳಿ ಚಂದ್ರಪ್ಪ



ಹೊನ್ನಾಳಿ, ಸೆ.15- ಪಟ್ಟಣದ ಪ್ರಾಥಮಿಕ ಸಹಕಾರಿ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕ್ ಉಪಾಧ್ಯಕ್ಷರಾಗಿ ಹರಳಹಳ್ಳಿಯ ಎ.ಹೆಚ್. ಚಂದ್ರಪ್ಪ ಅವರು ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಆಯ್ಕೆಯನ್ನು ಚುನಾವಣಾಧಿಕಾರಿಯಾಗಿದ್ದ ಸಹಕಾರ ಅಭಿವೃದ್ಧಿ ಅಧಿಕಾರಿ ಸತೀಶ್ ಕುಮಾರ್ ಘೋಷಿಸಿದರು. ಈ ಸಂದರ್ಭದಲ್ಲಿ ಮಾಜಿ ಶಾಸಕ ಶಾಂತನಗೌಡ, ಪಿಕಾರ್ಡ್ ಬ್ಯಾಂಕ್‌ನ ಅಧ್ಯಕ್ಷ ಎ.ನಾಗೇಂದ್ರಪ್ಪ, ನಿರ್ದೇಶಕರಾದ ಎಂ.ಆರ್.ಹನುಮಂತಪ್ಪ, ಸೋಮ್ಲಾನಾಯ್ಕ, ಜಿ.ಶಂಕರಪ್ಪ, ಹೆಚ್.ಪಿ.ವಿಜಯಕುಮಾರ್, ಎಂ. ಬಸವರಾಜಪ್ಪ, ಕೆ.ತಿಮ್ಮೇಶಪ್ಪ, ಟಿ.ಜೆ.ರಮೇಶ್‌ಗೌಡ, ಮಮತಾ ರಮೇಶ್, ಸರೋಜಪ್ಪ ಸಿದ್ದಪ್ಪ, ಮಾಣಿಕ್ಯ ನಾಯ್ಕ, ಕೆ.ಉಮಾಪತಿ, ಮುಖಂಡ ಅರಬಗಟ್ಟೆ ರಮೇಶ್ ಬ್ಯಾಂಕಿನ ವ್ಯವಸ್ಥಾಪಕರಾದ ಸಿ.ಎನ್.ವಿಶಾಲಕ್ಷಿ ಸೇರಿದಂತೆ ಇನ್ನಿತರರಿದ್ದರು.

# 5 ಸಾವಿರ ಮಾಸಾಶನ ನೀಡಬೇಕು



(1ನೇ ಪುಟದಿಂದ) ನೀಡಬೇಕು, ಬೆಳೆ ನಷ್ಟವಾದ ರೈತರಿಗೆ 50 ಸಾವಿರ ಪರಿಹಾರ ಕೊಡಬೇಕು, ಪಿಎಂ ಕಿಸಾನ್ ಯೋಜನೆಯಲ್ಲಿ ಬೆಳೆ ವಿಮೆ ತುಂಬಿರುವ ರೈತರ ಖಾತೆಗೆ ಕೂಡಲೇ ಹಣ ಹಾಕಿಸಬೇಕು ಎಂದು ಒತ್ತಾಯಿಸಿದರು.

ಪ್ರತಿಭಟನೆಯಲ್ಲಿ ರಾಜ್ಯ ಕಾರ್ಯದರ್ಶಿ ಕೆ.ಡಿಳ್ಳೆಪ್ಪ, ರಾಜ್ಯ ಸಂಘಟನಾ ಕಾರ್ಯದರ್ಶಿ ಮಮತಾ, ಸುಪುತ್ರ, ನಿಟ್ಟೂರು ಸೋಮಣ್ಣ, ಕೋಟಿ ಪಾಲಾಕ್ಷ ಗೌಡರು, ಕಂಚಿಕೇರಿ ಕೆಂಚಪ್ಪ, ಅರಸಿಕೇರಿ ಹಾಲಪ್ಪ ಸೇರಿದಂತೆ ಅನೇಕರು ಪಾಲ್ಗೊಂಡಿದ್ದರು.


**WANTED**
Well experienced in Accounts, Admin & Tele calling
Salary Rs. 8,000/-
Whatsapp your Resume
90089 85112

**ಬೇಕಾಗಿದ್ದಾರೆ**
ಔಷಧಿ ಅಂಗಡಿಯಲ್ಲಿ ಕೆಲಸ ನಿರ್ವಹಿಸಲು ಯುವಕರು ಬೇಕಾಗಿದ್ದಾರೆ.
ಅನುಭವ ಇರುವವರು / ಅನುಭವ ಇಲ್ಲದವರಿಗೂ ಅವಕಾಶವಿದೆ.
ಶ್ರೀ ವಾಸವಿ ಮೆಡಿಕಲ್ ಎಂಪೋರಿಯಮ್
ಪಿ.ಜೆ.ಬಡಾವಣೆ, ದಾವಣಗೆರೆ.
ಮೊ.94493 96461

**ಸುವರ್ಣ ಉದ್ಯೋಗಾವಕಾಶ**
ವಿದ್ಯಾರ್ಹತೆ : ಪಿಯುಸಿ or any ಡಿಗ್ರಿ. ವಯಸ್ಸು 18 ವರ್ಷ ಮೇಲ್ಪಟ್ಟು, ಯುವಕ-ಯುವತಿಯರು ಬೇಕಾಗಿದ್ದಾರೆ. ರೂ 9,000 - 12,000 ವರೆಗೆ. ನಿಮ್ಮ ವೃತ್ತಿಪರತೆ ನೋಡಿ ವೇತನ ಹೆಚ್ಚಿಸಲಾಗುವುದು ಹಾಗೂ ಯುವಕರಿಗೆ ದ್ವಿಚಕ್ರ ವಾಹನ ಇರುವವರಿಗೆ ಆದ್ಯತೆ, ಜೊತೆಗೆ ಡಿ.ಎಲ್., ಆರ್.ಸಿ. ಕಾರ್ಡ್ ಹೊಂದಿರಬೇಕು.
Ph : 8951455892, 99023 42040
ಅಡ್ರೆಸ್ : ಎಸ್.ಎಸ್. ಹೈಟೆಕ್ ಹಾಸ್ಪಿಟಲ್ ಮೇನ್ ರೋಡ್, ಲಕ್ಷ್ಮಿ ಲೇಔಟ್, ದಾವಣಗೆರೆ.

**JOBS**
MCS ACADEMY
Training & Placement Cell
98444 92888


## ಭಾವಪೂರ್ಣ ಶ್ರದ್ಧಾಂಜಲಿ



**ಡಾ॥ ಟಿ.ಎನ್. ನಾಯ್ಕ್**
ನಿವೃತ್ತ ಜಿಲ್ಲಾ ಸರ್ಜನ್, ದಾವಣಗೆರೆ.
ಭಗವಂತನು ಇವರ ಆತ್ಮಕ್ಕೆ ಚಿರಶಾಂತಿ ನೀಡಲೆಂದು ಬಯಸುವವರು....
ಮ್ಯಾನೇಜ್‌ಮೆಂಟ್, ಪ್ರಾಂಶುಪಾಲರು
ಬೋಧಕ, ಬೋಧಕೇತರ ಸಿಬ್ಬಂದಿ
(ಡಾ॥ ಆನಂದತೀರ್ಥ ಮೆಮೋರಿಯಲ್ ಆಸ್ಪತ್ರೆ)
ಅಶ್ವಿನಿ ವಿದ್ಯಾಸಂಸ್ಥೆ
ಆಯುರ್ವೇದಿಕ್ ಮೆಡಿಕಲ್ ಕಾಲೇಜ್ & ಆಸ್ಪತ್ರೆ, ದಾವಣಗೆರೆ.


Wewin
wewinbazaar.com
WANTED
TELE CALLERS
APP DESIGNERS & DEVELOPERS
SALES GIRLS
Send your Resum to this mail ID
kavyarockzzmsipl@gmail.com
MAHARAJ E-MART Pvt.Ltd.,
No. 768/500, Lokikere Main Road, Near Industrial Area, Davangere-577 005.
8951587670,9513636520


## ಹರಿಹರದ ಕಂಚಿಕೇರಿ ಪ್ರಮೀಳಮ್ಮ ನಿಧನ



ಹರಿಹರದ ಹೈಸ್ಕೂಲ್ ಬಡಾವಣೆ ಒಂದನೇ ಮುಖ್ಯರಸ್ತೆ ವಾಸಿಯಾದ ಕಂಚಿಕೇರಿ ಗಣೇಶಪ್ಪನವರ ಧರ್ಮಪತ್ನಿ ಶ್ರೀಮತಿ ಪ್ರಮೀಳಮ್ಮ ಕಂಚಿಕೇರಿ (74) ಅವರು ದಿನಾಂಕ 15.09.2021 ರ ಬುಧವಾರ ತಡ ರಾತ್ರಿ ನಿಧನರಾದರು. ಪತಿ, ನಾಲ್ವರು ಪುತ್ರರು, ಓರ್ವ ಪುತ್ರಿ ಸೇರಿದಂತೆ ಅಪಾರ ಬಂಧು - ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 16.09.2021 ರ ಗುರುವಾರ ಮಧ್ಯಾಹ್ನ 2 ಗಂಟೆಗೆ ನಗರದ ವೀರಶೈವ ಹಿಂದೂ ರುದ್ರಭೂಮಿಯಲ್ಲಿ ನಡೆಯಲಿದೆ.

## ಬೆಲೆಗೆ ಆಗ್ರಹ

(1ನೇ ಪುಟದಿಂದ) ಆಲೂರು ಪರಶುರಾಮ, ಬೂದಿ ಹಾಳ್ ಭಗತ್ ಸಿಂಹ, ಕಾಡಜ್ಜಿ ಪ್ರಕಾಶ್, ಹೂವಿನಮಡು ನಾಗರಾಜ, ನರಗನಹಳ್ಳಿ ನಾಗರಾಜ, ಹುಚ್ಚವ್ವನಹಳ್ಳಿ ಹನುಮಂತ, ಕೋಲ್ಕುಂಟೆ ಹುಚ್ಚೆಂಗಪ್ಪ ಇತರರು ಪ್ರತಿಭಟನೆಯಲ್ಲಿದ್ದರು.


**WANTED**
• Sales Executive (Male or Female)
• Floor Supervisor
• PDI Supervisor
• Service Advisor
Note: Freshers & Experience Candidates
Good Salary
ESI,PF + Incentive
Ph No : 8884445242


## ರಾಜಶೇಖರಪ್ಪ ಎಂ. ಓದಾನವರ್ ನಿಧನ



ದಾವಣಗೆರೆ ಸರಸ್ವತಿ ಬಡಾವಣೆ, ವಾಟರ್ ಟ್ಯಾಂಕ್ ಪಾರ್ಕ್ ಹತ್ತಿರ, ದೇವಿಕಾ ನಿಲಯದ ವಾಸಿ ರಾಜಶೇಖರಪ್ಪ ಎಂ ಓದಾನವರ್ (72) ಅವರು ದಿನಾಂಕ 15.09.2021 ರ ಬುಧವಾರ ಬೆಳಿಗ್ಗೆ 10 ಗಂಟೆಗೆ ನಿಧನರಾದರು. ಪತ್ನಿ, ಓರ್ವ ಪುತ್ರ, ನಾಲ್ವರು ಪುತ್ರಿಯರು, ಅಳಿಯಂದಿರು, ಮೊಮ್ಮಕ್ಕಳು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 16.09.2021 ರ ಗುರುವಾರ ಬೆಳಿಗ್ಗೆ 10.30 ಕ್ಕೆ ನಗರದ ಬೂದಾಳ್ ರಸ್ತೆಯಲ್ಲಿರುವ ರುದ್ರಭೂಮಿಯಲ್ಲಿ ನೆರವೇರಲಿದೆ.

## ಲೋಕಿಕೆರೆ ಕೋಡಿಹಳ್ಳಿ ಪಾರ್ವತಮ್ಮ ನಿಧನ



ದಾವಣಗೆರೆ ತಾಲ್ಲೂಕು ಬಸಾಪುರ ಗ್ರಾಮದ ವಾಸಿ ದಿ॥ ಲೋಕಿಕೆರೆ ಕೋಡಿಹಳ್ಳಿ ಬಸಪ್ಪನವರ ಧರ್ಮಪತ್ನಿ ಲೋಕಿಕೆರೆ ಕೋಡಿಹಳ್ಳಿ ಪಾರ್ವತಮ್ಮನವರು (85) ದಿನಾಂಕ : 15.9.2021ರ ಬುಧವಾರ ಮಧ್ಯಾಹ್ನ 2.05ಕ್ಕೆ ನಿಧನರಾದರು. 3 ಜನ ಗಂಡು ಮಕ್ಕಳು, 4ಜನ ಹೆಣ್ಣುಮಕ್ಕಳು ಹಾಗೂ ಅಪಾರ ಬಂಧುಗಳನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ : 16.09.2021ರ ಗುರುವಾರ ಮಧ್ಯಾಹ್ನ 12.00 ಗಂಟೆಗೆ ಮೃತರ ಸ್ವಗ್ರಾಮ ಬಸಾಪುರದ ರುದ್ರಭೂಮಿಯಲ್ಲಿ ನೆರವೇರಿಸಲಾಗುವುದು.

## ಹೊನ್ನಾಳಿ : ಕನ್ನಡಿಗರ ತೆರಿಗೆಯಲ್ಲಿ ಹಿಂದಿ ವೈಭವೀಕರಣ ಬೇಡ




ಹೊನ್ನಾಳಿ, ಸೆ.15- ಹಿಂದಿ ದಿವಸ್ ಹೆಸರಿನಲ್ಲಿ ಕನ್ನಡ ನಾಡು-ನುಡಿಗೆ ಧಕ್ಕೆಯಾಗದಿರಲಿ ಹಾಗು ಕನ್ನಡಿಗರ ತೆರಿಗೆಯಲ್ಲಿ ಹಿಂದಿ ವೈಭವೀಕರಣ ಸಹಿಸುವುದಿಲ್ಲ ಎಂದು ತಾಲ್ಲೂಕು ಕರವೇ ಅಧ್ಯಕ್ಷ ಎಂ. ವಿನಯ್ ವಗ್ಗರ್ ಹೇಳಿದರು. ಅವರು ಇಂದು ಕೇಂದ್ರ ಸರ್ಕಾರವು ಪ್ರತಿವರ್ಷ ಸೆಪ್ಟೆಂಬರ್ 14 ರಂದು ಹಿಂದಿ ದಿವಸ್ ಆಚರಿಸುವುದನ್ನು ವಿರೋಧಿಸಿ ಪಟ್ಟಣದ ಕೆಲವು ಬ್ಯಾಂಕ್‌ಗಳ ಮುಂದೆ ಪ್ರತಿಭಟನೆ ನಡೆಸಿ, ಬ್ಯಾಂಕಿನ ವ್ಯವಸ್ಥಾಪಕರಿಗೆ ಮನವಿ ಪತ್ರ ಸಲ್ಲಿಸಿ ಮಾತನಾಡಿದರು.

ಕರವೇ ಉಪಾಧ್ಯಕ್ಷ ಸಂತೋಷ್, ಜಾಕೀರ್, ಜಾವೀದ್, ಪ್ರವೀಣ್, ಸಂಪತ್, ರಾಮು, ಇಸ್ಮಾಯಿಲ್, ಅರುಣ್, ಪ್ರತಾಪ್, ರವಿ, ಅಣ್ಣಪ್ಪ, ಮಂಜುನಾಥ್ ಇನ್ನಿತರರಿದ್ದರು.

## ನಗರದಲ್ಲಿ ಇಂದು ವಿದ್ಯುತ್ ವ್ಯತ್ಯಯ

ಇಂದು ಬೆಳಿಗ್ಗೆ 10 ರಿಂದ ಸಂಜೆ 4 ರವರೆಗೆ ದೇವರಾಜ ಅರಸು ಬಡಾವಣೆ 'ಬಿ' ಬ್ಲಾಕ್ ಮತ್ತು 'ಸಿ' ಬ್ಲಾಕ್, ಎಸ್‌ಪಿ ಆಫೀಸ್, ಆರ್‌ಟಿಓ ಆಫೀಸ್, ವಿಜಯನಗರ ಬಡಾವಣೆ, ರಾಜೀವ್ ಗಾಂಧಿ ಬಡಾವಣೆ, ಎಸ್‌ಪಿಎಸ್ ನಗರ 2ನೇ ಹಂತ, ಎಸ್‌ಎಮ್‌ಕೆ ನಗರ, ವಾಲ್ಮೀಕಿ ಸರ್ಕಲ್ ಸುತ್ತಮುತ್ತ ಹಾಗೂ ಇತರೆ ಪ್ರದೇಶಗಳಲ್ಲಿ ವಿದ್ಯುತ್ ವ್ಯತ್ಯಯವುಂಟಾಗಲಿದೆ.

# ಈರುಳ್ಳಿ ಬೆಳೆಗೆ ಕನಿಷ್ಠ ಬೆಂಬಲ ಬೆಲೆಗಾಗಿ ಆಗ್ರಹಿಸಿ ಈರುಳ್ಳಿ ಸುರಿದು ಪ್ರತಿಭಟನೆ

ಜಗಳೂರು, ಸೆ.15- ಈರುಳ್ಳಿ ಬೆಲೆ ಕುಸಿದಿದ್ದು, ಕನಿಷ್ಠ ಬೆಂಬಲ ಬೆಲೆ ನಿಗದಿಗಾಗಿ ಆಗ್ರಹಿಸಿ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆ (ಹುಚ್ಚವನಹಳ್ಳಿ ಮಂಜುನಾಥ್) ಬಣದ ವತಿಯಿಂದ ಈರುಳ್ಳಿ ಸುರಿದು ಪ್ರತಿಭಟನೆ ನಡೆಸಲಾಯಿತು.

ಪಟ್ಟಣದ ಪ್ರವಾಸಿ ಮಂದಿರದಿಂದ ಹೊರಟ ಪ್ರತಿಭಟನಾಕಾರರು ಮಹಾತ್ಮಗಾಂಧಿ ವೃತ್ತದ ಬಳಿ ಈರುಳ್ಳಿ ಸುರಿದು ನಂತರ ಅಂಬೇಡ್ಕರ್ ವೃತ್ತದ ಮೂಲಕ ತಾಲ್ಲೂಕು ಕಚೇರಿಗೆ ತೆರಳಿ ತಹಶೀಲ್ದಾರ್ ಡಾ. ನಾಗವೇಣಿ ಅವರಿಗೆ ಲಿಖಿತ ಮನವಿ ಸಲ್ಲಿಸಿದರು.

ತಾಲ್ಲೂಕು ಪ್ರಧಾನ ಕಾರ್ಯದರ್ಶಿ ಚಿಕ್ಕ ಮಲ್ಲನ ಹೊಳೆ ಚಿರಂಜೀವಿ ಮಾತನಾಡಿ, ಕೇಂದ್ರ ಸರ್ಕಾರ ಕನಿಷ್ಠ ಬೆಂಬಲ ಬೆಲೆ ಘೋಷಿಸಿದ್ದರೂ ಸಹ ಸಮರ್ಪಕ ಕಾನೂನು ಜಾರಿಯಾಗದೆ, ರೈತರು ಬೀದಿಗೆ ಬಿದ್ದಿದ್ದಾರೆ. ಪ್ರಸ್ತುತ ಮಾರುಕಟ್ಟೆ ಖರೀದಿದಾರರು ಕ್ವಿಂಟಾಲ್‌ಗೆ 200 ರೂ. ರಿಂದ 300 ರೂ. ದರದಲ್ಲಿ ಖರೀದಿಸುತ್ತಿದ್ದಾರೆ. ಸೂಕ್ತ ಬೆಂಬಲ ಬೆಲೆ ದೊರೆಯದೆ, ನಷ್ಟ ಅನುಭವಿಸುವಂತಾಗಿ ಸಾಲದ ಸುಳಿಯಲ್ಲಿ ಸಿಲುಕಿ ರೈತರು ಆತ್ಮಹತ್ಯೆ ಹಾದಿ ತುಳಿಯುತ್ತಿದ್ದಾರೆ.



ಜಗಳೂರು

ರೈತರ ಪರ ಎಂದು ಹೇಳುವ ಪ್ರಧಾನಿ ನರೇಂದ್ರ ಮೋದಿ ಅವರ ಸರ್ಕಾರ ಕೂಡಲೇ ಎಂ.ಎಸ್.ಪಿ. ಕಾಯ್ದೆಯನ್ನು ಜಾರಿಗೆ ತರಬೇಕು. ಎಂ.ಎಸ್ ಪಿ ಕಾಯ್ದೆ ಜಾರಿಗೆ ತರಲು ಮೀನಾ - ಮೇಷ ಎಣಿಸುತ್ತಿರುವ ಪರಿಣಾಮ ಖರೀದಿಗಾರರು ಮನಬಂದಂತೆ ಖರೀದಿಸುತ್ತಿದ್ದಾರೆ.

ಕಂಪನಿ ಪರವಾಗಿ ಜಾರಿಗೊಳಿಸಿರುವ ಎಪಿಎಂಸಿ ಕಾಯ್ದೆ ಕೂಡಲೇ ಹಿಂಪಡೆಯದಿದ್ದರೆ, ಉಗ್ರ ಸ್ವರೂಪದ ಹೋರಾಟ ನಡೆಸಲಾಗುವುದು ಎಂದು ಎಚ್ಚರಿಸಿದರು.

ಪ್ರತಿಭಟನೆಯಲ್ಲಿ ಸಂಘಟನೆಯ ಜಿಲ್ಲಾ ಕಾರ್ಯದರ್ಶಿ ಸತೀಶ್, ತಾಲ್ಲೂಕು ಕಾರ್ಯದರ್ಶಿ ಲೋಕೇಶ್, ಪದಾಧಿಕಾರಿಗಳಾದ ಎಂ.ಶರಣಪ್ಪ, ರಾಜು, ಪ್ರಹ್ಲಾದ್, ನಾಗರಾಜ್, ವೀರೇಶ್, ಗುರುಮೂರ್ತಿ, ಸುಪುತ್ರಪ್ಪ, ಅಜ್ಜಪ್ಪ, ಹನುಮಂತಪ್ಪ, ಕುಮಾರ್, ಬಸಣ್ಣ, ಚಂದ್ರಪ್ಪ, ಮೇಘನಾಥ್, ಹೊನ್ನೂರ್ ಅಲಿ ಸೇರಿದಂತೆ ಇತರರು ಭಾಗವಹಿಸಿದ್ದರು.

## ಜಾತಿ ಗಣತಿ ವರದಿ ಬಿಡುಗಡೆ ಮಾಡಿ ಅಹಿಂದಕ್ಕೆ ನ್ಯಾಯ ದೊರಕಿಸಿ ಕೊಡಿ

ದಾವಣಗೆರೆ, ಸೆ.15- ರಾಜ್ಯದ ಜನಸಂಖ್ಯೆಯಲ್ಲಿ ಶೇ.80 ರಷ್ಟಿರುವ ಅಲ್ಪಸಂಖ್ಯಾತ-ಹಿಂದುಳಿದ-ದಲಿತ (ಅಹಿಂದ) ವರ್ಗಗಳಿಗೆ ನ್ಯಾಯ ದೊರಕಿಸಿ ಕೊಡುವಂತೆ ಅಹಿಂದ ಚೇತನ ಒತ್ತಾಯಿಸಿದೆ.

2016 ರಲ್ಲಿ ಅಂದಿನ ಮುಖ್ಯಮಂತ್ರಿ ಸಿದ್ಧರಾಮಯ್ಯ ಅವರ ಆಡಳಿತ ಅವಧಿಯಲ್ಲಿ 180 ಕೋಟಿ ರೂ. ವ್ಯಯಿಸಿ ಸಾಮಾಜಿಕ, ಶೈಕ್ಷಣಿಕ, ಆರ್ಥಿಕ ಸಮೀಕ್ಷೆಯನ್ನು ನಡೆಸಲಾಗಿತ್ತು. ಇದುವರೆಗೂ ವರದಿ ಬಿಡುಗಡೆಗೆ ಸರ್ಕಾರ ಮೀನಾಮೇಷ ಎಣಿಸುತ್ತಿದೆ ಎಂದು ಅಹಿಂದ ಚೇತನ ಕಾರ್ಯದರ್ಶಿ ರಾಜು ಮೌರ್ಯ ಸುದ್ದಿಗೋಷ್ಠಿಯಲ್ಲಿ ಆರೋಪಿಸಿದರು.

224 ವಿಧಾನಸಭಾ ಕ್ಷೇತ್ರಗಳಲ್ಲೂ ರಾಜ್ಯದ ಒಟ್ಟು ಜನಸಂಖ್ಯೆಯ ಶೇ. 80 ರಷ್ಟು ಅಲ್ಪಸಂಖ್ಯಾತ, ಹಿಂದುಳಿದ, ದಲಿತ ಸಮುದಾಯಗಳಿವೆ. ಸರ್ಕಾರದಿಂದ ಈ ಸಮುದಾಯಗಳಿಗೆ ಸಿಗಬೇಕಾದ ಹಕ್ಕುಗಳು, ರಾಜಕೀಯ ಸ್ಥಾನಮಾನಗಳು ಸಿಗುತ್ತಿಲ್ಲ ಎಂದು ದೂರಿದರು.

ಪತ್ರಿಕಾಗೋಷ್ಠಿಯಲ್ಲಿ ಅಹಿಂದ ಚೇತನ ಪದಾಧಿಕಾರಿಗಳಾದ ವಿನಾಯಕ ಕಟ್ಟೀಕರ, ಎ. ಹಸೇನ್, ಹೆಚ್.ಬಿ. ಕರಿಬಸವರಾಜ್, ಸೋಮಪ್ಪ ಮಲ್ಲೂರ, ಎಸ್.ಎಂ. ಸಿದ್ಧಲಿಂಗಪ್ಪ, ಸಿ. ಚಂದ್ರಶೇಖರ್ ಉಪಸ್ಥಿತರಿದ್ದರು.

## ವಿದ್ಯಾನಗರ ರೋಟರಿ ಕ್ಲಬ್ ವತಿಯಿಂದ ಓಝೋನ್ ಪದರ ಸಂರಕ್ಷಣೆ ದಿನಾಚರಣೆ

ದಾವಣಗೆರೆ, ಸೆ. 15- ನಗರದ ವಿದ್ಯಾನಗರ ರೋಟರಿ ಕ್ಲಬ್ ವತಿಯಿಂದ ಓಜೋನ್ ದಿನದ ಅಂಗವಾಗಿ ಕರೆಯಲಾಗಿದ್ದ ಓಜೋನ್ ಪದರ ಸಂರಕ್ಷಣೆ ಎಂಬ ಪ್ರಬಂಧ ಸ್ಪರ್ಧೆ ಏರ್ಪಡಿಸಲಾಗಿತ್ತು. ಕಾಲೇಜು ವಿಭಾಗದಿಂದ ಕೆ.ಎಸ್.ಅಕ್ಷತಾ (ಪ್ರಥಮ), ಕೆ.ಕವನ (ದ್ವಿತೀಯ), ಮಮತಾ ಪಿ ಕೆ (ತೃತೀಯ), ಪ್ರೌಢಶಾಲಾ ವಿಭಾಗದಲ್ಲಿ ಬಿ. ರಜಿಯಾ ಸುಲ್ತಾನ್ (ಪ್ರಥಮ), ಆರ್.ಅಮುದ್ (ದ್ವಿತೀಯ), ವಿ.ಪ್ರೇರಣಾ (ತೃತೀಯ) ವಿಜೇತರಾಗಿದ್ದಾರೆ ಎಂದು ಸಹಕಾರ್ಯದರ್ಶಿ ರೋಟೇರಿಯನ್ ರವಿಕುಮಾರ್ ತಿಳಿಸಿದ್ದಾರೆ.

# ಹಿಂದಿ ಸಪ್ತಾಹ ವಿರೋಧಿಸಿ ಕರವೇ ಪ್ರತಿಭಟನೆ

ದಾವಣಗೆರೆ, ಸೆ.15- ಹಿಂದಿ ಸಪ್ತಾಹ ವಿರೋಧಿಸಿ ಹಾಗೂ ಬ್ಯಾಂಕಿನಲ್ಲಿ ಗ್ರಾಹಕರ ಮೇಲಾಗುತ್ತಿರುವ ಹಿಂದಿ ಹೇರಿಕೆ ಮತ್ತು ದೌರ್ಜನ್ಯವನ್ನು ನಿಲ್ಲಿಸಿ ಕನ್ನಡದಲ್ಲಿ ಎಲ್ಲಾ ರೀತಿಯ ಸೇವೆ ನೀಡುವಂತೆ ಆಗ್ರಹಿಸಿ ಕರ್ನಾಟಕ ರಕ್ಷಣಾ ವೇದಿಕೆ (ಟಿ.ಎ. ನಾರಾಯಣ ಗೌಡ ಬಣ) ಜಿಲ್ಲಾ ಸಮಿತಿಯಿಂದ ನಿನ್ನೆ ನಗರದಲ್ಲಿ ಪ್ರತಿಭಟನೆ ನಡೆಸಲಾಯಿತು.



ಕರವೇ ಜಿಲ್ಲಾಧ್ಯಕ್ಷ ಎಂ.ಎಸ್. ರಾಮೇಗೌಡ ನೇತೃತ್ವದಲ್ಲಿ ಪ್ರತಿಭಟನಾ ಮೆರವಣಿಗೆ ಮುಖೇನ ಅಕ್ಕಮಹಾದೇವಿ ರಸ್ತೆಯಲ್ಲಿರುವ ಇಂಡಿಯನ್ ಬ್ಯಾಂಕ್ ಮುಂಭಾಗ ಪ್ರತಿಭಟಿಸಲಾಯಿತು. ನಂತರ ವಿವಿಧ ಬ್ಯಾಂಕ್ ಗಳಿಗೆ ತೆರಳಿ ಮನವಿ ಸಲ್ಲಿಸಲಾಗಿದೆ. ಅಂತೆಯೇ ಜಿಲ್ಲೆಯ 91ಕ್ಕಿಂತ ಹೆಚ್ಚು ಬ್ಯಾಂಕುಗಳ ಮುಂದೆ ಸಂಘಟನೆಯಿಂದ ಪ್ರತಿಭಟನೆ ನಡೆಸಿ ಮನವಿ ಸಲ್ಲಿಸಲಾಗಿದೆ.

ಭಾರತ ಒಕ್ಕೂಟ ಸರ್ಕಾರವು ಪ್ರತಿ ವರ್ಷ ಸೆಪ್ಟೆಂಬರ್ 14 ರಂದು ನಮ್ಮ ತೆರಿಗೆ ಹಣದಲ್ಲಿ ಹಿಂದಿ ದಿವಸ ಆಚರಣೆ ನಡೆಸುತ್ತಾ ಬಂದಿದೆ. ಒಕ್ಕೂಟ ಸರ್ಕಾರ ಕನ್ನಡ ದಿವಸ, ತಮಿಳು ದಿವಸ, ಬಂಗಾಳಿ ದಿವಸ, ಪಂಜಾಬಿ ದಿವಸ ಆಚರಿಸುವುದಿಲ್ಲ. ಕೇವಲ ಹಿಂದಿ ದಿವಸವೊಂದನ್ನು ಆಚರಿಸುವ ಮೂಲಕ ದೇಶದ ಎಲ್ಲ ಭಾಷೆಗಳನ್ನು ಕಡೆಗಣಿಸಿ ಹಿಂದಿಯೊಂದನ್ನೇ ಪ್ರತಿ ವರ್ಷ ಮೆರೆಸುತ್ತದೆ ಎಂದು ಪ್ರತಿಭಟನಾಕಾರರು ಅಸಮಾಧಾನ ವ್ಯಕ್ತಪಡಿಸಿದರು.

ಭಾರತೀಯ ಭಾಷೆಗಳಲ್ಲಿ ಹಿಂದಿಯೂ ಒಂದು ಅದಕ್ಕೆ ವಿಶೇಷ ಮಹತ್ವ , ಪ್ರೋತ್ಸಾಹ ನೀಡುವುದು ಅನ್ಯಾಯ. ಹಿಂದಿ ದಿವಸ ಆಚರಣೆಯ ಮೂಲಕ ಇತರೆ ಭಾರತೀಯ ಭಾಷೆಗಳನ್ನು ಕಡೆಗಣಿಸಿ ಇತರೆ ಭಾಷಿಕರನ್ನು ಎರಡನೇ ದರ್ಜೆ ಪ್ರಜೆಗಳನ್ನಾಗಿಸುವುದು ಅಕ್ಷಮ್ಯ ಎಂದರು.

ಹಿಂದಿ ಹೇರಿಕೆಯ ಪರಿಣಾಮವಾಗಿ ಕೇಂದ್ರ ಸರ್ಕಾರದ ಉದ್ಯೋಗಗಳು ಹಿಂದಿ ಭಾಷಿಕರ ಪಾಲಾಗುತ್ತಿವೆ. ಕನ್ನಡದ ಮಕ್ಕಳು ನಿರುದ್ಯೋಗದ ಸಮಸ್ಯೆ ಎದುರಿಸುವಂತಾಗಿದೆ. ಕರ್ನಾಟಕದ ಬ್ಯಾಂಕುಗಳಲ್ಲಿ ಸಿಬ್ಬಂದಿಗಳು ಬಹಳಷ್ಟು ಬಾರಿ ಕನ್ನಡದಲ್ಲಿ ಮಾತನಾಡುವುದಿಲ್ಲ. ಬ್ಯಾಂಕುಗಳ ಅರ್ಜಿ ನಮೂನೆಗಳು, ಚಲನ್‌ಗಳು ಹಲವು ಕಡೆಗಳಲ್ಲಿ ಕನ್ನಡದಲ್ಲಿ ಇರುವುದಿಲ್ಲ. ಇದು ಗ್ರಾಹಕರಿಗೆ ತೀವ್ರವಾದ ತೊಂದರೆಯನ್ನುಂಟು ಮಾಡುತ್ತಾ ಇದೆ ಎಂದು ಆಕ್ಷೇಪಿಸಿದರು.

ಪ್ರತಿಭಟನೆಯಲ್ಲಿ ಮಹಿಳಾ ಘಟಕದ ಜಿಲ್ಲಾಧ್ಯಕ್ಷೆ ಬಸಮ್ಮ, ಸಂತೋಷ, ಧರ್ಮರಾಜ್, ಮಂಜುಳಮ್ಮ, ಶಾಂತಮ್ಮ, ರೇಖಾ, ಜ್ಯೋತಿ, ದುರ್ಗಮ್ಮ, ಮಲ್ಲಿಕಾರ್ಜುನ್, ಲೋಕೇಶ್, ಸಂತೋಷ್, ರಫೀಕ್ ಅಹ್ಮದ್, ಗೌಸ್, ಜಬಿ ಉಲ್ಲಾ, ಗೋಪಾಲ್, ದೇವರಮನೆ ಧೀರೇಂದ್ರ, ಖಾದರ್ ಭಾಷಾ, ಸಚಿನ್, ಗಿರೀಶ್ ಸೇರಿದಂತೆ ಇತರರು ಭಾಗವಹಿಸಿದ್ದರು.

## ಟೆಲಿಕಾಂ ವಲಯಕ್ಕೆ ಟಾನಿಕ್

(1ನೇ ಪುಟದಿಂದ) ಮರಳಿಸಬಹುದು. ಸ್ಪೆಕ್ಟ್ರಮ್ ಹಂಚಿಕೆಗೆ ಸಂಪೂರ್ಣ ಅನುಮತಿ ಇರಲಿದ್ದು, ಇದು ಉಚಿತ ಎಂದು ಸಚಿವರು ಹೇಳಿದ್ದಾರೆ.

ವಿದೇಶಿ ನೇರ ಹೂಡಿಕೆಗೆ ಶೇ.100ರಷ್ಟು ಸ್ವಯಂ ಚಾಲಿತ ಅನುಮತಿ ನೀಡಲಾಗುವುದು. ಬಾಕಿ, ಎಜಿಆರ್ ಹಾಗೂ ಸ್ಪೆಕ್ಟ್ರಮ್ ಬಾಕಿ ಪಾವತಿಗೆ ನಾಲ್ಕು ವರ್ಷ ಬಿಡುವು ನೀಡಲಾಗಿದೆ ಎಂದು ಸಚಿವರು ಹೇಳಿದ್ದಾರೆ.

ಆಗಸ್ಟ್ 4ರಂದು ವೊಡಫೋನ್ ಐಡಿಯಾ ಅಧ್ಯಕ್ಷರಾಗಿದ್ದ ಕುಮಾರ್ ಮಂಗಳಂ ಬಿರ್ಲಾ ತಮ್ಮ ಹುದ್ದೆಗೆ ರಾಜೀನಾಮೆ ನೀಡಿದ್ದರು. ವೊಡಫೋನ್ ಐಡಿಯಾ ಕಂಪನಿ ಶುಲ್ಕ ಬಾಕಿಯಿಂದ ತೀವ್ರ ಒತ್ತಡಕ್ಕೆ ಸಿಲುಕಿತ್ತು. ಕಂಪನಿ ಹಲವು ವರ್ಷಗಳ ಹಿಂದಿನ 50,399.63 ಕೋಟಿ ರೂ. ಬಾಕಿ ಹೊಂದಿದೆ.

## ಕಾಲುಬಾಯಿ ರೋಗ ಉಲ್ಬಣ: ಚಿಕಿತ್ಸೆಗೆ ಮನವಿ

ಹರಪನಹಳ್ಳಿ, ಸೆ.15- ತಾಲ್ಲೂಕಿನ ಕಂಭತ್ತಹಳ್ಳಿ, ಮತ್ತಿಹಳ್ಳಿ, ಅರಸಿಕೇರಿ ಸೇರಿದಂತೆ ಉಚ್ಚಂಗಿದುರ್ಗ ಗ್ರಾಮಗಳಲ್ಲಿ ಜಾನುವಾರುಗಳು ಕಾಲು ಬಾಯಿ ರೋಗಕ್ಕೆ ತುತ್ತಾಗುತ್ತಿದ್ದು, ಸೂಕ್ತ ಚಿಕಿತ್ಸೆ ದೊರಕುತ್ತಿಲ್ಲ ಎಂಬುದು ರೈತರ ಆರೋಪವಾಗಿದೆ.


ಹರಪನಹಳ್ಳಿ

ಕಂಭತ್ತಹಳ್ಳಿ ಗ್ರಾಮ ಪಂಚಾಯ್ತಿ ಸದಸ್ಯ ಶ್ರೀನಿವಾಸ ನಾಯಕ ಮಾತನಾಡಿ, ಕೋವಿಡ್‌ನಿಂದ ರೈತರು, ಜನ ಸಾಮಾನ್ಯರು ತತ್ತರಿಸಿರುವುದು ಒಂದು ಕಡೆಯಾದರೆ, ಕಳೆದ 15 ದಿನಗಳಿಂದ ಕಂಭತ್ತಹಳ್ಳಿಯಲ್ಲಿಯೇ ದನ ಕರುಗಳು ಸೇರಿ ಒಟ್ಟು 50 ಪಶುಗಳು ಕಾಲು ಬಾಯಿ ಹಾಗೂ ಇತರೆ ರೋಗಕ್ಕೆ ತುತ್ತಾಗಿ ಸಾವಿಗೀಡಾಗಿವೆ.

ಈ ಕುರಿತು ಪ್ರತಿಕ್ರಿಯೆ ನೀಡಿದ ಕಂಭತ್ತಹಳ್ಳಿ ಗ್ರಾಮದ ರೈತ ಸಿದ್ದಪ್ಪ ಅವರು ಕಳೆದ ವರ್ಷ 70-80 ಸಾವಿರ ರೂ. ನೀಡಿ ತಂದಿದ್ದ ಆಕಳು ಕಾಲು ಬಾಯಿ ರೋಗದಿಂದ ಸತ್ತು ಹೋಗಿದೆ.

ಮತ್ತೊಂದು ಆಕಳು ಸಹ ಇದೇ ರೋಗದಿಂದ ಬಳಲುತ್ತಿದೆ. ಕಾಲುಬಾಯಿ ರೋಗ ಎಂದು ಹೇಳುತ್ತಾರೆ. ಇಂಜೆಕ್ಷನ್ ನೀಡಿದರೂ ಚಿಕಿತ್ಸೆ ಫಲಕಾರಿಯಾಗಿಲ್ಲ ಎಂದು ಹೇಳಿದರು.

ಈ ಕುರಿತು ಪ್ರತಿಕ್ರಿಯೆ ನೀಡಿದ ಪಶು ಇಲಾಖೆ ಸಹಾಯಕ ನಿರ್ದೇಶಕ ಡಾ. ಶಿವಕುಮಾರ್ ಅವರು ಕಾಲು ಬಾಯಿ ರೋಗಕ್ಕೆ ಶೀಘ್ರವೇ ವ್ಯಾಕ್ಸಿನ್ ಸರ್ಕಾರದಿಂದ ಸರಬರಾಜು ಆಗುತ್ತದೆ ಎಂದರು.

ವ್ಯಾಕ್ಸಿನ್ ಸರಬರಾಜು ಆದರೆ ಚಿಕಿತ್ಸೆ ನೀಡಲು 7 ತಂಡಗಳನ್ನು ರಚನೆ ಮಾಡಿದ್ದೇವೆ. 7 ವಾಹನಗಳ ಮೂಲಕ ಒಂದು ತಿಂಗಳು ಹಳ್ಳಿಗಳಿಗೆ ತೆರಳಿ ಪ್ರತಿ ಮನೆ ಮನೆಗೂ ಹೋಗಿ ಜಾನುವಾರುಗಳಿಗೆ ವ್ಯಾಕ್ಸಿನ್ ಹಾಕ ಲಿದ್ದು, ಅದೇ ಸಿದ್ಧತೆಯಲ್ಲಿದ್ದೇವೆ ಎಂದು ತಿಳಿಸಿದ್ದಾರೆ.


## ಕೆ.ಜಾವೀದ್ ಸಾಬ್, ಕೆ.ಜೆ.ಅಫಾಕ್ ರಜ್ವಿ ಅವರಿಗೆ ಟ್ರೇಡ್ ಎಕ್ಸ್‌ಲೆನ್ಸ್ ಅವಾರ್ಡ್



ದಾವಣಗೆರೆ, ಸೆ.15- ಕರ್ನಾಟಕ ವಾಣಿಜ್ಯ ಮತ್ತು ಕೈಗಾರಿಕಾ ಮಹಾಸಂಸ್ಥೆ (ಎಫ್.ಕೆ.ಸಿ.ಸಿ.ಐ) ಕೊಡಮಾಡುವ 2021ನೇ ಸಾಲಿನ ಟ್ರೇಡ್ ಎಕ್ಸ್‌ಲೆನ್ಸ್ ಅವಾರ್ಡ್ ಪ್ರಶಸ್ತಿ ನಗರದ ರಜ್ವಿ ಟ್ರೇಡರ್ಸ್‌ನ ಮಾಲೀಕ ಕೆ.ಜಾವೀದ್ ಸಾಬ್ ಮತ್ತು ಕೆ.ಜೆ. ಹೊಂಡೈ ಮಾಲೀಕ ಕೆ.ಜೆ. ಅಫಾಕ್ ರಜ್ವಿ ಅವರಿಗೆ ದೊರೆತಿದೆ.

ಬೆಂಗಳೂರಿನ ಫೆಡರೇಷನ್ ಹೌಸ್‌ನಲ್ಲಿರುವ ಸರ್ ಎಂ.ವಿ. ಆಡಿಟೋರಿಯಂನಲ್ಲಿ ನಿನ್ನೆ ನಡೆದ ಸಮಾರಂಭದಲ್ಲಿ ಕೇಂದ್ರ ಸಚಿವರಾದ ಭಗವಂತ ಕೂಬಾ ಮತ್ತು ಪೇರಿಕಲ್ ಎಂ.ಸುಂದರ್ ಇವರು ಪ್ರಶಸ್ತಿ ಪ್ರದಾನ ಮಾಡಿದರು. ಜಾವೀದ್ ಸಾಬ್ ಹಾಗೂ ಕೆ.ಜೆ.ಅಫಾಕ್ ರಜ್ವಿ ಅವರುಗಳು ಹೊಂಡೈ ಕಾರುಗಳ ಮಾರಾಟಗಾರರಷ್ಟೇ ಅಲ್ಲದೇ, ಭತ್ತ ಹಾಗೂ ಮೆಕ್ಕೆಜೋಳದ ವ್ಯಾಪಾರಿಯೂ ಆಗಿದ್ದಾರೆ.

## ಅಣಜಿ : ಸರ್ಕಾರಿ ಮಾದರಿ ಹಿ.ಪ್ರಾ. ಶಾಲೆಯ ನವೀಕೃತ ಕಟ್ಟಡ ಉದ್ಘಾಟನೆ



ದಾವಣಗೆರೆ, ಸೆ. 15- ತಾಲ್ಲೂಕಿನ ಅಣಜಿ ಗ್ರಾಮದ ಸರ್ಕಾರಿ ಮಾದರಿ ಹಿರಿಯ ಪ್ರಾಥಮಿಕ ಶಾಲೆಯ ನವೀಕೃತ ಕಟ್ಟಡವನ್ನು ಉದ್ಘಾಟಿಸಲಾಯಿತು. ಬಿ.ಇ.ಓ ಕೊಟ್ರೇಶ್ ಕಟ್ಟಡದ ಉದ್ಘಾಟನೆ ನೆರವೇರಿಸಿದರು. ಈ ಸಂದರ್ಭದಲ್ಲಿ ಎ.ಪಿ.ಎಂ.ಸಿ ಅಧ್ಯಕ್ಷ ಎಸ್.ಕೆ. ಚಂದ್ರಶೇಖರ್, ದಾನಿಗಳಾದ ಚೌಡ್ಕಿ ಪಾರ್ವತಮ್ಮ ಶಿವರಾಮಪ್ಪ, ಬಿ. ಆರ್.ಸಿ ಸುರೇಂದ್ರನಾಯ್ಕ, ಇ.ಸಿ.ಓ ನಾಗರಾಜ್, ದಾವಣಗೆರೆ ಉತ್ತರ ವಲಯದ ಸಿ.ಆರ್.ಪಿ ಮುರುಗೇಶ್, ಎಸ್.ಡಿ.ಎಂ.ಸಿ ಅಧ್ಯಕ್ಷ ಕರಿಬಸಪ್ಪ, ಮುಖ್ಯೋಪಾಧ್ಯಾಯ ಹನುಮಂತಪ್ಪ ಮತ್ತಿತರರು ಉಪಸ್ಥಿತರಿದ್ದರು.

## ರಾತ್ರಿ 10 ರವರೆಗೆ ವ್ಯಾಪಾರದ ಅವಕಾಶಕ್ಕೆ ಆಮ್ ಆದ್ಮಿ ಒತ್ತಾಯ

ದಾವಣಗೆರೆ, ಸೆ.15- ಅಂಗಡಿ-ಮುಂಗಟ್ಟುಗಳಿಗೆ ರಾತ್ರಿ 9ರ ಬದಲಾಗಿ 10 ಗಂಟೆವರೆಗೆ ಅವಕಾಶ ನೀಡುವಂತೆ ಆಮ್ ಆದ್ಮಿ ಪಕ್ಷದ ಜಿಲ್ಲಾ ಸಮಿತಿ ಅಧ್ಯಕ್ಷ ಕೆ.ಎಲ್. ರಾಘವೇಂದ್ರ ಜಿಲ್ಲಾಡಳಿತಕ್ಕೆ ಒತ್ತಾಯಿಸಿದ್ದಾರೆ

ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಕೊರೊನಾ ಸೋಂಕು ಇಳಿಮುಖವಾಗಿದ್ದು, ಇದೀಗ ಆರ್ಥಿಕ ಚಟುವಟಿಕೆಗಳು ಗರಿಗೆದರುತ್ತಿವೆ. ಶಾಲಾ ಕಾಲೇಜುಗಳು ಆರಂಭವಾಗಿವೆ. ಶಾಲಾ ಶುಲ್ಕ, ಪಠ್ಯಪುಸ್ತಕ ಖರೀದಿಗೆ ಹಣಬೇಕಾಗಿರುತ್ತದೆ. ಆದರೆ, ವ್ಯವಹಾರವನ್ನು ರಾತ್ರಿ 9 ಗಂಟೆಗೆ ಸೀಮಿತಗೊಳಿಸದೆ, 10ರವರೆಗೆ ಅನುಮತಿ ನೀಡಿದರೆ ಆರ್ಥಿಕ ಪರಿಸ್ಥಿತಿ ಸುಧಾರಿಸಲು ಅನುಕೂಲವಾಗುತ್ತದೆ. ಈ ನಿಟ್ಟಿನಲ್ಲಿ ಜಿಲ್ಲಾಡಳಿತ ಅವಕಾಶ ಮಾಡಿಕೊಡಬೇಕೆಂದು ಅವರು ಒತ್ತಾಯಿಸಿದರು.

ಪತ್ರಿಕಾಗೋಷ್ಠಿಯಲ್ಲಿ ಆದಿಲ್ ಖಾನ್, ಸಮೀರ್ ಹಸನ್, ಕರಿಯಪ್ಪ ಟಿ.ಎಸ್. ಉಪಸ್ಥಿತರಿದ್ದರು.

## ಮಲೇಬೆನ್ನೂರು : ಗಮನ ಸೆಳೆದ 'ದಕ್ಷಯಜ್ಞ'

ಮಲೇಬೆನ್ನೂರು, ಸೆ.15- ಪಟ್ಟಣದ ಶ್ರೀ ವೀರಭದ್ರೇಶ್ವರ ದೇವಸ್ಥಾನದಲ್ಲಿ ವೀರಭದ್ರೇಶ್ವರ ಜಯಂತ್ಯೋತ್ಸವದ ಅಂಗವಾಗಿ ಮಂಗಳವಾರ ರಾತ್ರಿ ಹಮ್ಮಿಕೊಂಡಿದ್ದ ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಶಿವಮೊಗ್ಗದ ಅಂತರರಾಷ್ಟ್ರೀಯ ಭರತನಾಟ್ಯ ಕಲಾವಿದರಾದ ವಿದ್ವಾನ್ ಕೇಶವಕುಮಾರ್ ಅವರ ಶಿಷ್ಯಂದಿರು ನಡೆಸಿಕೊಟ್ಟ 'ದಕ್ಷಯಜ್ಞ' ನೃತ್ಯರೂಪಕ ಎಲ್ಲರ ಗಮನ ಸೆಳೆಯಿತು.

ಇದಲ್ಲದೆ, ಏಕದಂತ, ಜಟಾಧರ, ಕಂಸಾಳೆ, ಸುಗ್ಗಿ ಕಾಲ, ಚಂದ್ರಮೂಡ, ಅಭಿಮಾನ, ಜಲ್ಲೆಕಬ್ಬು, ಸವದತ್ತಿ, ಏನು ಕೊಡ ಎಲ್ಲೋ ಜೋಗಪ್ಪ, ಕೊಟ್ಟೂರು, ಚಲ್ಲಿದರು ಮಲ್ಲಿಗೆಯಾ, ಕರಗ, ಮುಕುಂದ ಮತ್ತು ಒಂದೇ ಮಾತರಂ ನೃತ್ಯಗಳು ಎಲ್ಲರ ಮನ ಸೂರೆಗೊಂಡವು. ದೇವಸ್ಥಾನ ಟ್ರಸ್ಟ್ ಅಧ್ಯಕ್ಷ ಬಿ. ಪಂಚಪ್ಪ, ಖ್ಯಾತ ಜವಳಿ ವರ್ತಕ ಬಿ.ಸಿ. ಉಮಾಪತಿ, ಜೆಡಿಎಸ್ ಮುಖಂಡ ಹೆಚ್.ಎಸ್. ಅರವಿಂದ್, ಎಪಿಎಂಸಿ ಅಧ್ಯಕ್ಷ ಜಿ. ಮಂಜುನಾಥ್ ಪಟೇಲ್, ಜಿಲ್ಲಾ ಜೆಡಿಎಸ್ ಅಧ್ಯಕ್ಷರೂ ಆದ ದೇವಸ್ಥಾನ ಟ್ರಸ್ಟ್ ಉಪಾಧ್ಯಕ್ಷ ಬಿ. ಚಿದಾನಂದಪ್ಪ, ಟ್ರಸ್ಟಿಗಳಾದ ಬಿ. ನಾಗೇಂದ್ರಪ್ಪ, ಎನ್.ಕೆ. ವೃಷಬೇಂದ್ರಪ್ಪ, ಬಿ. ಮಹಾರುದ್ರಪ್ಪ, ಬಿ. ಉಮಾಶಂಕರ್, ಬಿ. ಮಲ್ಲಿಕಾರ್ಜುನ್, ಬಿ. ನಾಗೇಶ್, ಬಿ.ವಿ. ರುದ್ರೇಶ್, ಎಸ್.ಎನ್. ಶಂಭುಲಿಂಗಪ್ಪ, ಬಿ.ಎಂ. ಹರ್ಷ, ಸಮಾಜ ಸೇವಕ ನಂದಿಗಾವಿ ಶ್ರೀನಿವಾಸ್ ಸೇರಿದಂತೆ ಇನ್ನೂ ಅನೇಕರು ಈ ವೇಳೆ ಹಾಜರಿದ್ದರು.

## ಆಸ್ಕರ್ ನಿಧನಕ್ಕೆ ಸಂತಾಪ

ದಾವಣಗೆರೆ, ಸೆ.14- ರಾಜ್ಯಸಭಾ ಸದಸ್ಯ ಆಸ್ಕರ್ ಫರ್ನಾಂಡೀಸ್ ಅವರ ನಿಧನಕ್ಕೆ ಸೋಮಲಾಪುರ ಹನುಮಂತಪ್ಪ ಸಂತಾಪ ವ್ಯಕ್ತಪಡಿಸಿದ್ದಾರೆ.

ಫರ್ನಾಂಡೀಸ್ ಪಕ್ಷದ ನಿಷ್ಠಾವಂತ ಮುಖಂಡರಾಗಿದ್ದರು. ಆರು ದಶಕಗಳ ಕಾಲ ಪಕ್ಷದ ಶಿಸ್ತಿನ ಸಿಪಾಯಿಯಾಗಿ ಸಾಮಾನ್ಯ ಕಾರ್ಯಕರ್ತರ ಬಗ್ಗೆ ಅಪಾರ ಕಾಳಜಿ ಹೊಂದಿದ್ದರು ಎಂದು ಹನುಮಂತಪ್ಪ ಸಂತಾಪ ಸೂಚಕದಲ್ಲಿ ನೆನಪಿಸಿಕೊಂಡಿದ್ದಾರೆ.

## ಜಾಹ್ನವಿಗೆ ಸಾಹಿತ್ಯಶ್ರೀ ಪ್ರಶಸ್ತಿ

(1ನೇ ಪುಟದಿಂದ) ಮಾಡಲಾಯಿತು. ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ಇಂಧನ ಸಚಿವ ವಿ.ಸುನೀಲ್ ಕುಮಾರ್, ಸಂಸದ ತೇಜಸ್ವಿ ಸೂರ್ಯ, ಅಕಾಡೆಮಿ ಅಧ್ಯಕ್ಷ ಡಾ. ಬಿ.ವಿ.ವಸಂತ್ ಕುಮಾರ್, ರಿಜಿ ಸ್ಟ್ರಾರ್ ಕರಿಯಪ್ಪ ಸೇರಿದಂತೆ ಮತ್ತಿತರರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

## ಷೇರು : ಏರಿಕೆ

(1ನೇ ಪುಟದಿಂದ) ಸಹ 139.95 ಅಂಕಗಳ ಏರಿಕೆ ಕಂಡಿದ್ದು 16519ರಲ್ಲಿ ಅಂತ್ಯವಾಗಿದೆ. ಎನ್.ಟಿ.ಪಿ.ಸಿ. ಷೇರುಗಳ ಮೌಲ್ಯ ಶೇ.7.16ರ ಏರಿಕೆ ಕಂಡಿದೆ. ಭಾರತಿ ಏರ್‌ಟೆಲ್ ಷೇರು ಮೌಲ್ಯ ಶೇ.4.53ರ ಏರಿಕೆಯಾಗಿದೆ. ಪವರ್ ಗ್ರಿಡ್, ಟಿಸಿಎಸ್, ಇಂಡಸ್‌ಇಂಡ್ ಬ್ಯಾಂಕ್ ಷೇರುಗಳಲ್ಲಿ ಏರಿಕೆ ಕಂಡುಬಂದಿದೆ.

## ಪಂಪ್‌ಸೆಟ್ ಕೇಬಲ್ ಕಳ್ಳನಿಗೆ ಧರ್ಮದೇಟು



ದಾವಣಗೆರೆ, ಸೆ.15- ಜಮೀನಿನಲ್ಲಿನ ಪಂಪ್ ಸೆಟ್ ಗೆ ಅಳವಡಿಸಿದ್ದ ಕೇಬಲ್ ಕಳ್ಳತನ ಮಾಡುತ್ತಿದ್ದ ಕಳ್ಳನನ್ನು ಹಿಡಿದು ಧರ್ಮದೇಟು ನೀಡಿ, ಪೊಲೀಸರಿಗೆ ಒಪ್ಪಿಸಿದ ಘಟನೆ ತಾಲ್ಲೂಕಿನ ಸುಲ್ತಾನಿಪುರ ಗ್ರಾಮದಲ್ಲಿ ಇಂದು ನಡೆದಿದೆ.

ಸುಲ್ತಾನಿಪುರ, ಅಣ್ಣಾಪುರ ಗ್ರಾಮಗಳು ಸೇರಿದಂತೆ ಹಲವು ಹಳ್ಳಿಗಳಲ್ಲಿ ಅನೇಕ ದಿನಗಳಿಂದ ಜಮೀನಿನಲ್ಲಿ ನೀರು ಹಾಯಿಸಲು ಇರುವ ಪಂಪ್‌ಸೆಟ್‌ಗೆ ಅಳವಡಿಸಿದ್ದ ಕೇಬಲ್ ಕಳ್ಳತನ ನಡೆಯುತ್ತಿತ್ತು. ಇದರಿಂದ ರೋಸಿ ಹೋಗಿದ್ದ ರೈತರು ರಾತ್ರಿಯಿಡೀ ತೋಟಕ್ಕೆ ಹೋಗಿ ಕಾಯುತ್ತಿದ್ದರು.

ಬೋರ್‌ವೆಲ್ ಕೇಬಲ್ ಕತ್ತರಿಸುತ್ತಿದ್ದ ಕಳ್ಳನು ರೈತರ ಕೈಗೆ ಸಿಕ್ಕಿ ಬಿದ್ದಿದ್ದು, ಧರ್ಮದೇಟು ನೀಡಿ ಪೊಲೀಸರಿಗೆ ಒಪ್ಪಿಸಿದ್ದಾರೆ.

## ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ತರಬೇತಿ

ದಾವಣಗೆರೆ, ಸೆ. 15- ಎಸ್ಸಿ, ಎಸ್ಟಿ ವಿದ್ಯಾರ್ಥಿಗಳಿಗೆ ಜೆಇಇ, ನೀಟ್ ಪ್ರವೇಶ ಪರೀಕ್ಷೆ ವರೆಗೆ ತರಬೇತಿ ನೀಡಲಾಗುತ್ತದೆ.

ಪ್ರಥಮ ಪಿಯುಸಿ ವಿಜ್ಞಾನ ವಿಭಾಗದಲ್ಲಿ ವ್ಯಾಸಂಗ ಮಾಡುತ್ತಿರುವ ಅಭ್ಯರ್ಥಿಗಳಿಗೆ ದ್ವಿತೀಯ ಪಿಯುಸಿ ಮುಕ್ತಾಯದವರೆಗೂ 24 ತಿಂಗಳು ಅಥವಾ 2023ರ ಏಪ್ರಿಲ್ ಮತ್ತು ಮೇ ತಿಂಗಳಿನಲ್ಲಿ ನಡೆಯಲಿರುವ ಜೆಇಇ ಮತ್ತು ನೀಟ್ ಪ್ರವೇಶ ಪರೀಕ್ಷೆವರೆಗೂ ಹಾಗೂ ದ್ವಿತೀಯ ಪಿಯುಸಿ ವಿಜ್ಞಾನ ವಿಭಾಗದಲ್ಲಿ ವ್ಯಾಸಂಗ ಮಾಡುತ್ತಿರುವವರಿಗೆ 10 ತಿಂಗಳು ಅಥವಾ 2022ರ ಏಪ್ರಿಲ್ - ಮೇ ತಿಂಗಳಿನಲ್ಲಿ ನಡೆಯಲಿರುವ ಜೆಇಇ, ನೀಟ್ ಪ್ರವೇಶ ಪರೀಕ್ಷೆವರೆಗೂ ಆನ್‌ಲೈನ್ ತರಬೇತಿ ನೀಡಲಾಗುವುದು.

ಅರ್ಜಿಯನ್ನು ಇದೇ ದಿನಾಂಕ 18ರೊಳಗೆ ಸಮಾಜ ಕಲ್ಯಾಣ ಇಲಾಖೆಯ ವೆಬ್‌ಸೈಟ್ www.sw.kar.nic.in ಮೂಲಕ ಸಲ್ಲಿಸಬೇಕು.


## ಶಿವ ಸಹಕಾರಿ ಬ್ಯಾಂಕ್ ನಿ.,

ಆಡಳಿತ ಕಚೇರಿ ಮತ್ತು ಪ್ರಧಾನ ಕಛೇರಿ : ಹಳೇ ಆಸ್ಪತ್ರೆ ರಸ್ತೆ, ದಾವಣಗೆರೆ-577 001.
ದೂರವಾಣಿ : 08192-256107, ಮೊಬೈಲ್ : 94498 19322, 99644 34634, 9480447320

### ಬ್ಯಾಂಕಿನ ಸದಸ್ಯರ ಗಮನಕ್ಕೆ

**ಈ ಮೂಲಕ ಸದಸ್ಯರಿಗೆ ತಿಳಿಯಪಡಿಸುವುದೇನೆಂದರೆ, ಕೋವಿಡ್ -19 ವೈರಸ್ ತೀವ್ರಗತಿಯಲ್ಲಿ ಹರಡುತ್ತಿರುವ ಹಿನ್ನೆಲೆಯಲ್ಲಿ ಕರ್ನಾಟಕ ಸರ್ಕಾರದ ಆದೇಶ ಸಂಖ್ಯೆ ಸಇ60 ಸಿಎಲ್‌ಎಮ್ 2021(ಇ), ಬೆಂಗಳೂರು, ದಿನಾಂಕ 04.08.2021ರನ್ವಯ, ಮುಖ್ಯವಾಗಿ ಬ್ಯಾಂಕಿನ ಸರ್ವ ಸದಸ್ಯರ ಸುರಕ್ಷತೆಯನ್ನು ಕಾಪಾಡುವ ಉದ್ದೇಶದಿಂದ ದಿನಾಂಕ 25.08.2021ರಂದು ನಡೆದ ಆಡಳಿತ ಮಂಡಳಿ ಸಭೆಯಲ್ಲಿ ವಾರ್ಷಿಕ ಮಹಾಸಭೆಯನ್ನು 'ವಿಡಿಯೋ ಕಾನ್ಫರೆನ್ಸ್/ವೆಬ್‌ಕಾಸ್ಟ್' ಮೂಲಕ ದಿನಾಂಕ 19.9.2021ರ ಭಾನುವಾರ ಬೆಳಿಗ್ಗೆ 11.30 ಗಂಟೆಗೆ ನಡೆಸಲು ತೀರ್ಮಾನಿಸಲಾಗಿರುತ್ತದೆ.**

**ಆದ್ದರಿಂದ ಈಗಾಗಲೇ ತಮ್ಮ ಮೊಬೈಲ್‌ಗೆ ಕಳುಹಿಸಲಾಗಿರುವ https:/seeall.live/SSBN ಲಿಂಕ್ ಒತ್ತಿ Member ID (ಸದಸ್ಯತ್ವ ಸಂಖ್ಯೆ) Entry ಮಾಡುವುದರ ಮೂಲಕ ತಾವುಗಳು ವಾರ್ಷಿಕ ಮಹಾಸಭೆಯಲ್ಲಿ ವಿಡಿಯೋ ಕಾನ್ಫರೆನ್ಸ್/ವೆಬ್‌ಕಾಸ್ಟ್ ಮೂಲಕ ಭಾಗವಹಿಸಲು ವಿನಂತಿಸಲಾಗಿದೆ. ಈ ಲಿಂಕ್ ಅನ್ನು ತಾವುಗಳು ಉಪಯೋಗಿಸಿದ್ದಲ್ಲಿ ಐದು ವಾರ್ಷಿಕ ಸಾಮಾನ್ಯ ಸಭೆಗಳ ಪೈಕಿ ಸದಸ್ಯರು ಮೂರು ಸಭೆಗಳಿಗೆ ಹಾಜರಾಗುವುದು ಕಡ್ಡಾಯವಾಗಿರುವುದರಿಂದ ವಾರ್ಷಿಕ ಸಾಮಾನ್ಯ ಸಭೆಯಲ್ಲಿ ಹಾಜರಾತಿಯನ್ನು ಗಣನೆಗೆ ತೆಗೆದುಕೊಳ್ಳಲಾಗುವುದು.**

**ಎಲ್ಲಾ ಅರ್ಹ ಸದಸ್ಯರಿಗೆ ವಾರ್ಷಿಕ ಮಹಾಸಭೆಯ ವರದಿ ಪುಸ್ತಕವನ್ನು ಅಂಚೆ ಮೂಲಕ ಈಗಾಗಲೇ ಕಳುಹಿಸಲಾಗಿರುತ್ತದೆ. ಮಾನ್ಯ ಸದಸ್ಯ ಬಾಂಧವರಿಗೆ ವಾರ್ಷಿಕ ಮಹಾಸಭೆಯ ಪುಸ್ತಕವು ಸ್ವೀಕೃತಿಯಾಗದೇ ಇದ್ದಲ್ಲಿ ಈ ಪ್ರಕಟಣೆಯೇ ವಾರ್ಷಿಕ ಮಹಾಸಭೆಯ ತಿಳುವಳಿಕೆ ಪತ್ರವೆಂದು ಪರಿಗಣಿಸಿ, ವಿಡಿಯೋ ಕಾನ್ಫರೆನ್ಸ್ ಮೂಲಕ ಮಹಾಸಭೆಗೆ ಹಾಜರಾಗಲು ವಿನಂತಿಸಲಾಗಿದೆ.**

ಆಡಳಿತ ಮಂಡಲಿ ಪರವಾಗಿ

ಎಂ.ಬಿ. ಸಂಗಮೇಶ್ವರಗೌಡರು
ಅಧ್ಯಕ್ಷರು

ಐಗೂರು ಸಿ. ಚಂದ್ರಶೇಖರ್
ಉಪಾಧ್ಯಕ್ಷರು



## CHANDAN MARKETING
ಚಂದನ್ ಮಾರ್ಕೆಟಿಂಗ್
BOSCH

Authorised Distributors for Bosch Spares & Lubricants,
Davangere, APMC Yard 'E' Block No. - 39

- ✦ Wanted Sales Executive - 01 (Any Degree)
- ✦ Stockist - 01 (SSLC)
- ✦ Marketing Executive - 01 (B.E. or Diploma Mech)
- ✦ Accountant - 01 (B.Com) Tally ಅನುಭವಿಗಳಿಗೆ ಆದ್ಯತೆ

ಮೊ. : 7892945089, 9663156253



## ದೂಡ ಅಧ್ಯಕ್ಷ ದೇವರಮನೆ ಶಿವಕುಮಾರ್ ಅವರಿಗೆ ಸನ್ಮಾನ



ದಾವಣಗೆರೆ, ಸೆ. 15 - ಬಿಜೆಪಿ ಮಾಜಿ ಜಿಲ್ಲಾಧ್ಯಕ್ಷ ಎಲ್. ಬಸವರಾಜ್ ಅವರ ಕುಟುಂಬದವರಿಂದ ನೂತನ ದೂಡಾ ಅಧ್ಯಕ್ಷರಾದ ದೇವರಮನೆ ಶಿವಕುಮಾರ್ ಅವರನ್ನು ಇತ್ತೀಚೆಗೆ ಅವರ ಸ್ವಗೃಹದಲ್ಲಿ ಸನ್ಮಾನಿಸಿದರು.

ಈ ಸಂದರ್ಭದಲ್ಲಿ ಮಹೇಶ್ ರೋಣದ್, ಟಿಂಕರ್ ಮಂಜಣ್ಣ, ಸದಾನಂದ್ (ಪ್ರಕಾಶ್) ಅವರುಗಳು ಹಾಜರಿದ್ದರು.

Advt.


## ಸಹಕಾರ ಸಂಘಗಳ ಸಹಾಯಕ ನಿಬಂಧಕರು, ದಾವಣಗೆರೆ ಉಪ ವಿಭಾಗ, ದಾವಣಗೆರೆ ಇವರ ನ್ಯಾಯಾಲಯದಲ್ಲಿ

**ವ್ಯಾಜ್ಯ ಸಂಖ್ಯೆ: ಡಿಆರ್ ಡಿವಿಜಿ/ಡಿಐಎಸ್/07/2020-21**

**ಅರ್ಜಿದಾರರು :** ವ್ಯವಸ್ಥಾಪಕರು,
ಮಿಲ್ಲತ್ ಕೋ-ಆಪರೇಟಿವ್ ಬ್ಯಾಂಕ್ ಲಿ., ಚೌಕಿಪೇಟೆ, ದಾವಣಗೆರೆ,
**ವಿರುದ್ಧ ಎದುರುದಾರರು:** ಶಂಕರ್ ರಾವ್ ಕೆ. ಬಿನ್ ಕ್ರಿಷ್ಣೋಜಿ ರಾವ್,
#185/5, 1ನೇ ಮೇನ್, 10ನೇ ಕ್ರಾಸ್,
ದೇವರಾಜ ಅರಸು ಲೇಔಟ್, ದಾವಣಗೆರೆ.

ಮೇಲ್ಕಂಡ ವ್ಯಾಜ್ಯದಲ್ಲಿ ಅರ್ಜಿದಾರರು ಎದುರುದಾರರ ವಿರುದ್ಧ ದಾವೆ ಮೊತ್ತ ಮತ್ತು ಈ ನ್ಯಾಯಾಲಯದ ವೆಚ್ಚದ ಹಣದ ವಸೂಲಾತಿಗಾಗಿ ದಾವೆಯನ್ನು ಸಲ್ಲಿಸಿದ್ದು, ಈ ನ್ಯಾಯಾಲಯದಿಂದ 1ನೇ ಎದುರುದಾರರಾದ ನಿಮಗೆ ದಿ: 20-03-2021 ರಂದು ವಿಚಾರಣೆಗೆ ಹಾಜರಾಗಲು ನೋಂದಣಿ ಅಂಚೆ ಮೂಲಕ ನೋಟೀಸು ಕಳುಹಿಸಿದ್ದು ನಿಮಗೆ ನೋಟೀಸು ಜಾರಿಯಾಗದ ಕಾರಣ ದಿ: 18-9-2021ರಂದು ಮಧ್ಯಾಹ್ನ 3 ಗಂಟೆಗೆ ಮೇಲ್ಕಂಡ ನ್ಯಾಯಾಲಯದಲ್ಲಿ ಖುದ್ದಾಗಿ ಹಾಜರಾಗಿ ನಿಮ್ಮ ತಕರಾರು ಸಲ್ಲಿಸಬಹುದು. ತಪ್ಪಿದಲ್ಲಿ ನಿಮ್ಮ ಗೈರು ಹಾಜರಿಯಲ್ಲಿ ಸದರಿ ವ್ಯಾಜ್ಯವನ್ನು ಏಕಪಕ್ಷೀಯವಾಗಿ ತೀರ್ಮಾನಿಸಲಾಗುವುದು ತಿಳಿಯಿರಿ. ಈ ನ್ಯಾಯಾಲಯದ ಮೊಹರು ಹಾಗೂ ನನ್ನ ಸಹಿಯೊಂದಿಗೆ ದಿ:13-9-2021 ರಂದು ಕೊಡಲ್ಪಟ್ಟಿದೆ.

**ವಾದಿಯ ಪರ:**
**ವ್ಯವಸ್ಥಾಪಕರು, ಮಿಲ್ಲತ್ ಕೋ-ಆಪರೇಟಿವ್ ಬ್ಯಾಂಕ್ ಲಿ., ಚೌಕಿಪೇಟೆ, ದಾವಣಗೆರೆ.**

**ನ್ಯಾಯಾಲಯದ ಅಪ್ಪಣೆ ಮೇರೆಗೆ**
**ಸಹಕಾರ ಸಂಘಗಳ ಸಹಾಯಕ ನಿಬಂಧಕರು, ದಾವಣಗೆರೆ ಉಪ ವಿಭಾಗ, ದಾವಣಗೆರೆ ಜಿಲ್ಲೆ, ದಾವಣಗೆರೆ.**

## ಪೊಲೀಸ್ ಕಾನ್‌ಸ್ಟೇಬಲ್‌ಗೆ ಕಲ್ಲಿನೇಟು



ದಾವಣಗೆರೆ, ಸೆ.15- ಎರಡು ಗುಂಪುಗಳ ನಡುವಿನ ಗಲಾಟೆಯನ್ನು ಬಿಡಿಸಲೆಂದು ಹೋದ ಪೊಲೀಸ್ ಕಾನ್‌ಸ್ಟೇಬಲ್ ತಲೆಗೆ ಕಲ್ಲಿನಿಂದ ಹಲ್ಲೆ ನಡೆಸಿ ಗಾಯಗೊಳಿಸಿರುವ ಘಟನೆ ಮಾಯಕೊಂಡ ಪೊಲೀಸ್ ಠಾಣಾ ವ್ಯಾಪ್ತಿಯ ಹಿರೇತೊಗಲೇರಿ ಗ್ರಾಮದಲ್ಲಿ ನಿನ್ನೆ ರಾತ್ರಿ ನಡೆದಿದೆ. ಹನುಮಂತರಾವ್ ಗಾಯಗೊಂಡ ಪೇದೆಯಾಗಿದ್ದು, ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ.

ಹಿರೇತೊಗಲೇರಿ ಗ್ರಾಮದಲ್ಲಿ ಹಬ್ಬದ ಆಚರಣೆ ವೇಳೆ ಮದ್ಯ ಸೇವಿಸಿದ ಮತ್ತಲ್ಲಿ ಎರಡು ಗುಂಪಿನ ನಡುವೆ ಗಲಾಟೆ ನಡೆಯುವಾಗ, ಅದನ್ನು ತಹಬಂದಿಗೆ ತರಲು ಯತ್ನಿಸಿದರೂ ಸಾಧ್ಯವಾಗಿಲ್ಲ. ಈ ವೇಳೆ ಹನುಮಂತರಾವ್ ಒಬ್ಬರನ್ನು ಜೀಪಿನಲ್ಲಿ ಹತ್ತಿಸಿಕೊಂಡಿದ್ದಾರೆ. ಆ ಗ್ರಾಮದ ನಿವೃತ್ತ ಎಎಸ್‌ಐ ಕಡೆಯವರು ತಮ್ಮ ಎದುರಾಳಿಗೆ ಕಲ್ಲಿನಿಂದ ಹಲ್ಲೆ ಮಾಡಲು ಮುಂದಾದಾಗ ಅದು ಹನುಮಂತರಾವ್ ಅವರ ತಲೆಗೆ ತಗುಲಿ ಗಂಭೀರವಾಗಿ ಗಾಯಗೊಂಡಿದ್ದಾರೆ.

ಸ್ಥಳಕ್ಕೆ ಎಸ್‌ಪಿ ಸಿ.ಬಿ.ರಿಷ್ಯಂತ್ ಭೇಟಿ ನೀಡಿ, ಪರಿಸ್ಥಿತಿಯನ್ನು ತಹಬಂದಿಗೆ ತಂದಿದ್ದಾರೆ. ಮಾಯಕೊಂಡ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

## ನಾಡಿದ್ದು ನಗರಕ್ಕೆ ವಸತಿ ಸಚಿವ ಸೋಮಣ್ಣ

ದಾವಣಗೆರೆ, ಸೆ.15- ವಸತಿ ಹಾಗೂ ಮೂಲಸೌಲಭ್ಯ ಅಭಿವೃದ್ಧಿ ಸಚಿವ ವಿ.ಸೋಮಣ್ಣ ಇದೇ ದಿನಾಂಕ 19 ರಂದು ನಗರಕ್ಕೆ ಆಗಮಿಸಲಿದ್ದಾರೆ.ಅಂದು ಬೆಳಿಗ್ಗೆ 9.30 ಕ್ಕೆ ದಾವಣಗೆರೆಗೆ ಆಗಮಿಸುವ ಸಚಿವರು, ಬಳಿಕ 10 ಕ್ಕೆ ತ್ರಿಶೂಲ್ ಕಲಾ ಭವನದಲ್ಲಿ ಪಕ್ಷದ ರಾಜ್ಯ ಕಾರ್ಯಕಾರಣಿ ಸಭೆಯಲ್ಲಿ ಭಾಗವಹಿಸುವರು.

# ಅಕ್ಷರ ಕಲಿಕೆ ಯೋಜನೆ ಜಾರಿಗೆ ಅಧಿವೇಶನದಲ್ಲಿ ಚರ್ಚೆ ಆಗಲಿ

### ವಿಶ್ವ ಸಾಕ್ಷರತಾ ದಿನಾಚರಣೆಯ ಸಮಾರೋಪ ಸಮಾರಂಭದಲ್ಲಿ ಹರಿಹರ ನಗರಸಭಾ ಸದಸ್ಯ ಶಂಕರ್ ಖಟಾವ್‌ಕರ್ ಆಗ್ರಹ

ಹರಿಹರ, ಸೆ.15- ಸಾಕ್ಷರತಾ ಪ್ರಮಾಣ ಹೆಚ್ಚಿಸಲು ಸರ್ಕಾರ ಅನುದಾನ ನೀಡಿ, ಕಾರ್ಯಕರ್ತರಿಗೆ ಪ್ರೋತ್ಸಾಹ ನೀಡಬೇಕು ಎಂದು ನಗರಸಭಾ ಸದಸ್ಯ ಶಂಕರ್ ಖಟಾವ್‌ಕರ್ ಆಗ್ರಹಿಸಿದರು.

ತಾಲ್ಲೂಕಿನ ಗುರುಭವನದಲ್ಲಿ ಬುಧವಾರ ತಾಲ್ಲೂಕು ಪ್ರೇರಕರ ಸಂಘ, ಧಾರವಾಡ ಲೋಕ ಶಿಕ್ಷಣ, ಸಂಸ್ಕೃತಿ ಸೇವಾ ಸಂಸ್ಥೆ ಹಾಗೂ ಸೇವಾ ಭಾರತ್ ಅಂತರರಾಷ್ಟ್ರೀಯ ಸಂಸ್ಥೆಯ ಸಹಯೋಗದಲ್ಲಿ ಸಂಘಟಿಸಿದ್ದ ವಿಶ್ವ ಸಾಕ್ಷರತಾ ದಿನಾಚರಣೆಯ ಸಮಾರೋಪ ಸಮಾರಂಭದಲ್ಲಿ ಪಾಲ್ಗೊಂಡು ಅವರು ಮಾತನಾಡಿದರು.

ದೇಶದಲ್ಲಿ ಸಾಕ್ಷರತೆ ಶೇ.75 ಇದ್ದು, ಶೇ.100 ಗುರಿ ತಲುಪಲು ಅಕ್ಷರ ಕಾರ್ಯಕರ್ತರು, ಕಲಾವಿದರು ಮತ್ತು ಸಂಯೋಜಕರಿಗೆ ಸರ್ಕಾರ ಮುಖ್ಯಮಂತ್ರಿ ಮತ್ತು ಶಾಸಕರು ಇದೇ ಅಧಿವೇಶನದಲ್ಲಿ ಚರ್ಚಿಸಿ, ಅವಕಾಶ ನೀಡಿ ಸದೃಢ ಸಾಕ್ಷರ ಭಾರತ ನಿರ್ಮಿಸಲು ನೆರವಾಗಬೇಕು ಎಂದು ಅವರು ಒತ್ತಾಯಿಸಿದರು.

ಹರಿಹರ ತಾಲ್ಲೂಕಿನಲ್ಲಿ ಅಕ್ಷರ ಚಳುವಳಿಯ ಕಾರ್ಯಕರ್ತರು ಹಗಲಿರುಳೂ ಶ್ರಮಿಸಿ ದೇಶದ ಸಾಕ್ಷರತೆಗೆ ದುಡಿದಿದ್ದಾರೆ. ಅವರನ್ನು ಅಕ್ಷರ ಕಲಿಕೆಯ



ಕಟ್ಟಡ ನಿರ್ಮಾಣಕ್ಕೆ ಅಣಿಗೊಳಿಸಲು ಖಟಾವ್ ಕರ್ ಸಲಹೆ ನೀಡಿದರು.

ನಿವೃತ್ತ ಪ್ರಾಧ್ಯಾಪಕ ಸಿ.ವಿ.ಪಾಟೀಲ್ ಮಾತನಾಡಿ, ಸಾಕ್ಷರತಾ ಆಂದೋಲನ ಆರಂಭಿಸುವ ಮೊದಲು ಸಂಯೋಜಕರ ಭದ್ರತೆಗೆ ಭಾರತ ಜ್ಞಾನ-ವಿಜ್ಞಾನ ಸಮಿತಿಯಿಂದ ವಾತಾವರಣ ನಿರ್ಮಾಣ ಸಾಧ್ಯವಾಯಿತು. ರಾಜಕಾರಣಿಗಳು, ಅಕ್ಷರ ಕಾರ್ಯಕರ್ತರ ಮಧ್ಯೆ ಸಾಮ್ಯತೆ ಇಲ್ಲದೇ ಸಹಕಾರ ದೊರಕಲಿಲ್ಲ ಎಂದು ವಿಷಾದಿಸಿದರು.

ಜಿಲ್ಲಾ ವಯಸ್ಕರ ಶಿಕ್ಷಣಾಧಿಕಾರಿ ಅಂಬಣ್ಣ ಮಾತನಾಡಿ, ಭಾರತ ಇಡೀ ಪ್ರಪಂಚಕ್ಕೆ ಮಾನವ ಶಕ್ತಿ ನೀಡಿದ್ದು, 2030ಕ್ಕೆ ಸಂಪೂರ್ಣ ಸಾಕ್ಷರತಾ ಗುರಿ ಹಾಕಿಕೊಂಡಿದೆ. ದೇಶದಲ್ಲಿಯೇ ಕರ್ನಾಟಕ ರಾಜ್ಯ ಸಾಕ್ಷರತೆಯಲ್ಲಿ 15ನೇ ಸ್ಥಾನ ಪಡೆದುಕೊಂಡಿದೆ. ದಾವಣಗೆರೆ ರಾಜ್ಯದಲ್ಲಿ 12ನೇ ಸ್ಥಾನದಲ್ಲಿದೆ. ಹರಿಹರ ಶೇ.72 ಇದೆ. ದೇಶದಲ್ಲಿಯೇ ತ್ರಿಪುರ ಪ್ರಥಮ ಸ್ಥಾನದಲ್ಲಿದೆ. ಕೇರಳ 2ನೇ ಸ್ಥಾನಕ್ಕೆ ಹೋಗಿದೆ. ನಮ್ಮ ರಾಜ್ಯದಲ್ಲಿ ಸಾಕ್ಷರತೆ ಪ್ರಮಾಣ ಶೇ.75 ಇದೆ. ಅದರಲ್ಲಿ ದಾವಣಗೆರೆ ಜಿಲ್ಲೆ ಶೇ.76 ಇದೆ ಎಂದರು.

ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ನಿವೃತ್ತ ವಯಸ್ಕರ ಶಿಕ್ಷಣಾಧಿಕಾರಿ ಡಾ. ಐ.ಎ.ಲೋಕಾಪೂರ್ ಮಾತನಾಡಿ, ಸಾಕ್ಷರತೆ ಪ್ರಗತಿಗೆ ಪ್ರೇರಕರೇ ಶಕ್ತಿ. ನೀವೆಲ್ಲಾ ಯಾವುದೇ ಸಹಾಯ ದೊರಕದಿದ್ದರೂ ಸಾಕ್ಷರತೆ ಹೆಚ್ಚುಸುವಲ್ಲಿ ಶ್ರಮವಹಿಸಿದ್ದೀರಿ ಎಂದು ಶ್ಲಾಘಿಸಿದರು.

ಸಂಯೋಜನಾಧಿಕಾರಿಯಾಗಿ ಕಾರ್ಯ ನಿರ್ವಹಿಸಿದ ಎಸ್.ಹೆಚ್.ಹೂಗಾರ್, ಎ.ಸಿದ್ದಲಿಂಗಪ್ಪ, ನೋಟಗಾರ್, ಕೊಟ್ರಬಸಪ್ಪ, ಸೇವಾ ಭಾರತ್‌ನ ಜಯಪ್ರಕಾಶ್, ಪ್ರೇರಕರ ಸಂಘದ ಅಧ್ಯಕ್ಷ ಬೂದಿಹಾಳ್ ಕೆಂಚವೀರಪ್ಪ, ಮೋಸಸ್ ಅಮನ್ನ ಮತ್ತಿತರರು ಮಾತನಾಡಿದರು. ಸಮಾಜ ಸೇವಾಕರ್ತೆ ಆಲಿಸ್ ಸಾಲೋಮನ್ ಪ್ರಾಸ್ತಾವಿಕ ನುಡಿಗಳನ್ನಾಡಿದರು. ಕಲಾವಿದರು ಕ್ರಾಂತಿಗೀತೆ ಹಾಡಿದರು.

ಹೊಳೆಸಿರಿಗೆರೆ ಎಂ.ಶಿವಕುಮಾರ್ ಸ್ವಾಗತಿಸಿದರು. ಚನ್ನಗಿರಿಯ ಗುರುಮೂರ್ತಿ ಕಾರ್ಯಕ್ರಮ ನಿರೂಪಿಸಿದರು. ಕಲಾವಿದ ವಸಂತ ವಂದಿಸಿದರು.

# ಕಾಂಗ್ರೆಸ್ ಬಲವರ್ಧನೆಗೆ ಕಾರ್ಯಕರ್ತರು ಶ್ರಮಿಸಬೇಕು

### ಜಗಳೂರಿನಲ್ಲಿ ಮಾಜಿ ಶಾಸಕ ಹೆಚ್.ಪಿ.ರಾಜೇಶ್



ಜಗಳೂರು, ಸೆ.15- ತಳಮಟ್ಟದಲ್ಲಿ ಕಾಂಗ್ರೆಸ್ ಬಲವರ್ಧನೆಗೆ ಕಾರ್ಯಕರ್ತರು ಶ್ರಮಿಸಬೇಕು ಎಂದು ಮಾಜಿ ಶಾಸಕ ಹೆಚ್.ಪಿ.ರಾಜೇಶ್ ಕರೆ ನೀಡಿದರು.

ತಾಲ್ಲೂಕಿನ ಕ್ಯಾಸೇನಹಳ್ಳಿ ಗ್ರಾಮದಲ್ಲಿ ಬ್ಲಾಕ್ ಕಾಂಗ್ರೆಸ್ ವತಿಯಿಂದ ಇಂದು ಏರ್ಪಾಡಾಗಿದ್ದ ಗ್ರಾಮ ಪಂಚಾಯತ್ ಪ್ರಾಜೆಕ್ಟ್ ಪ್ರತಿನಿಧಿ ಸಭೆಯನ್ನು ಉದ್ಘಾಟಿಸಿ ಅವರು ಮಾತನಾಡಿದರು.

ತಳಮಟ್ಟದಲ್ಲಿ ಪಕ್ಷವನ್ನು ಸಜ್ಜುಗೊಳಿಸುವ ಮೂಲಕ ಕಾಂಗ್ರೆಸ್ಸನ್ನು ಕೇಡರ್ ಬೇಸ್ ಪಕ್ಷವನ್ನಾಗಿ ಮಾಡಲು ಗ್ರಾಮ ಪಂಚಾಯತಿ ಮಟ್ಟದಲ್ಲಿ ಪದಾಧಿಕಾರಿಗಳನ್ನು ಆಯ್ಕೆ ಮಾಡಿ, ಅಧ್ಯಕ್ಷರಿಗೆ ಪಕ್ಷದ ಜವಾಬ್ದಾರಿ ನೀಡಲಾಗುವುದು ಎಂದು ಹೇಳಿದರು.

ರಾಜ್ಯದಲ್ಲಿ 5 ವರ್ಷಗಳ ಕಾಲ ಸುಭದ್ರ ಆಡಳಿತ ನೀಡಿದ ಮಾಜಿ ಮುಖ್ಯ ಮಂತ್ರಿ ಸಿದ್ದರಾಮಯ್ಯ ಅವರ ನೇತೃತ್ವದಲ್ಲಿ 175 ಭರವಸೆಗಳನ್ನು ಈಡೇರಿಸುವ ಮೂಲಕ ಸರ್ವ ಜನಾಂಗದ ಅಭಿವೃದ್ಧಿ ಮಾಡಲಾಯಿತು. ಜಗಳೂರು ಕ್ಷೇತ್ರಕ್ಕೆ 3300 ಕೋಟಿ ಅನುದಾನ ತಂದು ಹಳ್ಳಿಗಳ ಅಭಿವೃದ್ಧಿ ಮಾಡಲಾಯಿತು. ಆದರೆ, ನಮ್ಮ ಸಾಧನೆಗಳನ್ನು ಜನತೆಗೆ ಮುಟ್ಟಿಸಲಾಗ ಲಿಲ್ಲ. ಅದರ ಪರಿಣಾಮ ಸೋಲಬೇಕಾಯಿತು ಎಂದು ರಾಜೇಶ್ ಹೇಳಿದರು.

ಕೆರೆ ಊಳೆತ್ತುವ ನೆಪದಲ್ಲಿ ಅಭಿವೃದ್ಧಿ ಮಾಡದೇ ಅನುದಾನ ದುರುಪಯೋಗವಾಗಿದೆ. 3 ವರ್ಷಗಳು ಕಳೆದರೂ ಕ್ಷೇತ್ರದಲ್ಲಿ ಒಂದೇ ವಸತಿ ಯೋಜನೆ ನೀಡಲಾಗಿಲ್ಲ. ಭೂಮಿ ಹಕ್ಕುಪತ್ರ ನೀಡಲಾಗಿಲ್ಲ ಎಂದು ಬಿಜೆಪಿ ವಿರುದ್ಧ ಮಾಜಿ ಶಾಸಕರು ಹರಿಹಾಯ್ದರು.

ಬ್ಲಾಕ್ ಉಸ್ತುವಾರಿ ನಟರಾಜ್ ಮಾತನಾಡಿ, ಬಿಜೆಪಿಯವರು 70 ವರ್ಷ ಕಾಂಗ್ರೆಸ್ ಏನು ಮಾಡಿದೆ ಎಂದು ಪ್ರಶ್ನೆ ಮಾಡುತ್ತಾರೆ. ಅಂತವರಿಗೆ ದೇಶಕ್ಕೆ ಸ್ವಾತಂತ್ರ್ಯ ತಂದು ಕೊಟ್ಟ ಪಕ್ಷ ಕಾಂಗ್ರೆಸ್.ಉತ್ತಮ ಆಡಳಿತ ಹಾಗೂ ಪ್ರಜಾಪ್ರಭುತ್ವದ ಬುನಾದಿಗೆ ಬಾಬಾ ಸಾಹೇಬ್ ಅಂಬೇಡ್ಕರ್ ಮುಖಾಂತರ ಸಂವಿಧಾನ ನೀಡಿದ್ದು ಕಾಂಗ್ರೆಸ್ ಪಕ್ಷ ಎಂದರು.

ಕೇವಲ ಏಳು ವರ್ಷ ಅಧಿಕಾರ ನಡೆಸಿದ ಮೋದಿ ನೇತೃತ್ವದ ಬಿಜೆಪಿ ಸರ್ಕಾರ ಅಗತ್ಯ ವಸ್ತುಗಳಾದ ಪೆಟ್ರೋಲ್, ಡೀಸೆಲ್, ಅಡುಗೆ ಅನಿಲ, ಖಾದ್ಯ ತೈಲ, ದ್ವಿದಳ ಧಾನ್ಯಗಳ ಬೆಲೆ ಏರಿಸಿ ಜನರಿಂದ ತೆರಿಗೆ ರೂಪದಲ್ಲಿ ಹಗಲು ದರೋಡೆ ನಡೆಸುತ್ತಿದ್ದಾರೆ ಎಂದು ಆರೋಪಿಸಿದರು.

ಕೆಪಿಸಿಸಿ ಎಸ್ಟಿ ವಿಭಾಗ ರಾಜ್ಯಾಧ್ಯಕ್ಷ ಕೆ.ಪಿ. ಪಾಲಯ್ಯ ಮಾತನಾಡಿ, ಕ್ಷೇತ್ರದಲ್ಲಿ ಕಾಂಗ್ರೆಸ್ ಕಾರ್ಯಕರ್ತರು ಕೇಡರ್ ಬೇಸ್ ಮೂಲಕ ವ್ಯಕ್ತಿ ಪೂಜೆ ಮಾಡದೇ ಪಕ್ಷ ಮುಖ್ಯ ಎಂದು ಭಾವಿಸಿ ಗ್ರಾಮೀಣ ಮಟ್ಟದಲ್ಲಿ ಪಕ್ಷವನ್ನು ಬಲಗೊಳಿಸಿ ಮುಂಬರುವ ಜಿಲ್ಲಾ ಪಂಚಾಯತಿ, ತಾಲ್ಲೂಕು ಪಂಚಾಯಿತಿ ಚುನಾವಣೆಯಲ್ಲಿ ಪಕ್ಷದ ಅಭ್ಯರ್ಥಿಯನ್ನು ಗೆಲ್ಲಿಸುವಂತ ಕೆಲಸ ಮಾಡಬೇಕು ಎಂದು ಕರೆ ನೀಡಿದರು.

ಇದೇ ವೇಳೆ ಕ್ಯಾಸೇನಹಳ್ಳಿ ಗ್ರಾಮ ಪಂಚಾಯತಿ ಮಟ್ಟದ ಕಾಂಗ್ರೆಸ್ ಸಮಿತಿ ರಚಿಸಿ ಪದಾಧಿಕಾರಿಗಳನ್ನು ನೇಮಕ ಮಾಡಲಾಯಿತು. ಗ್ರಾಮ ಮಟ್ಟದ ಅಧ್ಯಕ್ಷರಾಗಿ ಗೌರಿಪುರ ನಂಜುಡಸ್ವಾಮಿ ಅವರನ್ನು ನೇಮಕ ಮಾಡಲಾಯಿತು.

ಈ ಸಂದರ್ಭದಲ್ಲಿ ಬ್ಲಾಕ್ ಅಧ್ಯಕ್ಷ ಷಂಷೀರ್ ಅಹಮದ್, ಅರಸೀಕೆರೆ ಬ್ಲಾಕ್ ಅಧ್ಯಕ್ಷ ಕಮ್ಮತ್ತಹಳ್ಳಿ ಮಂಜಣ್ಣ, ಬ್ಲಾಕ್ ಕಾಂಗ್ರೆಸ್ ಉಸ್ತುವಾರಿ ಕಲ್ಲೇಶ್ ರಾಜ್ ಪಟೇಲ್, ಪ್ರಧಾನ ಕಾರ್ಯದರ್ಶಿ ಪಲ್ಲಾಗಟ್ಟೆ ಶೇಖರಪ್ಪ, ಜಿ.ಪಂ. ಮಾಜಿ ಸದಸ್ಯ ಎಸ್. ಕೆ.ರಾಮರೆಡ್ಡಿ, ಮಾಜಿ ಅಧ್ಯಕ್ಷ ತಿಪ್ಪೇಸ್ವಾಮಿ ಗೌಡ್ರು, ತಾ.ಪಂ ಮಾಜಿ ಅಧ್ಯಕ್ಷ ಶಿವಕುಮಾರ್, ಮಾಜಿ ಸದಸ್ಯ ರಾಮಚಂದ್ರಪ್ಪ, ಮತ್ತಿತರರು ಉಪಸ್ಥಿತರಿದ್ದರು.

# ಅರ್ಪಣಾ ಮನೋಭಾವ ಬೇಕು



### ಕರುಣಾ ಜೀವ ಕಲ್ಯಾಣ ಟ್ರಸ್ಟ್ ಕಾರ್ಯದರ್ಶಿ ಶಿವನಕೆರೆ ಬಸವಲಿಂಗಪ್ಪ ಆಶಯ

ದಾವಣಗೆರೆ, ಸೆ. 15- ಶೈಕ್ಷಣಿಕ ಪ್ರಗತಿಗೆ ಶಿಕ್ಷಕರು ಅರ್ಪಣಾ ಮನೋಭಾವ ಮೂಡಿಸಿಕೊಂಡಾಗ ಮಕ್ಕಳ ಅಭಿವೃದ್ಧಿ ಸಾಧ್ಯ ಎಂದು ಕರುಣಾ ಜೀವ ಕಲ್ಯಾಣ ಟ್ರಸ್ಟ್ ಕಾರ್ಯದರ್ಶಿ ಶಿವನಕೆರೆ ಬಸವಲಿಂಗಪ್ಪ ಅಭಿಪ್ರಾಯಪಟ್ಟರು.

ನಗರದ ಕರುಣಾ ಜೀವ ಕಲ್ಯಾಣ ಟ್ರಸ್ಟ್ ಕಛೇರಿಯಲ್ಲಿ ಏರ್ಪಡಿಸಿದ್ದ ಶಿಕ್ಷಕರ ದಿನಾಚರಣೆ ಮತ್ತು ಕೃತಜ್ಞತಾ ಸಮರ್ಪಣಾ ಸಮಾರಂಭದ ಅಧ್ಯಕ್ಷತೆ ವಹಿಸಿ ಅವರು ಮಾತನಾಡುತ್ತಿದ್ದರು.

ಸಾಮಾಜಿಕವಾಗಿ, ಶೈಕ್ಷಣಿಕವಾಗಿ ಬೆಳೆಯಲು ಶಿಕ್ಷಕರ ಕೊಡುಗೆ ಅನನ್ಯ. ಅಂತಹ ಶ್ರೇಷ್ಠ ಶಿಕ್ಷಕರನ್ನು ಇಂದು ನಮ್ಮ ಟ್ರಸ್ಟ್ ಗುರ್ತಿಸಿ ಅವರನ್ನು ಗೌರವಿಸುವುದರ ಮೂಲಕ ತನ್ನನ್ನು ತಾನು ಗೌರವಿಸಿಕೊಂಡಿದೆ ಎಂದರು.

ಮುಖ್ಯ ಅತಿಥಿಯಾಗಿ ಭಾಗವಹಿಸಿದ್ದ ಶಿಕ್ಷಣ ತಜ್ಞ ಡಾ. ಹೆಚ್.ವಿ. ವಾಮದೇವಪ್ಪ ಮಾತನಾಡಿ, ಟ್ರಸ್ಟ್‌ನ ರೂಪುರೇಷೆ ಬಗ್ಗೆ ತಿಳಿಸಿ ಜಿಲ್ಲಾದ್ಯಂತ ಶಿಕ್ಷಕರ ತರಬೇತಿ ಮೂಲಕ ಗುಣಮಟ್ಟದ ಶಿಕ್ಷಣ ನೀಡುವಲ್ಲಿ ಶಿಕ್ಷಕರ ಪಾತ್ರ ಮಹತ್ವದ್ದು ಎಂದರು.

ಮತ್ತೋರ್ವ ಅತಿಥಿಯಾಗಿದ್ದ ಶರಣಪ್ಪ ಮಾತನಾಡಿ, ಮಕ್ಕಳ ಮಟ್ಟಕ್ಕಿಳಿದು ಕಲಿಸಿದಾಗ ಶೈಕ್ಷಣಿಕ ಪ್ರಗತಿ ಸಾಧ್ಯ. ಸಾಹಿತ್ಯ, ಸಂಸ್ಕೃತಿ,ಸಂಸ್ಕಾರ ಬೆಳೆಸಲು ಸಾಧ್ಯ ಎಂದರು. ಜಿಲ್ಲೆಯ ವಿವಿಧ ಶಾಲೆಗಳ ಶ್ರೇಷ್ಠ ಶಿಕ್ಷಕರಾದ ಶ್ರೀಮತಿ ಸುನೀತಾ, ಶ್ರೀಮತಿ ಭುವನೇಶ್ವರಿ, ಸೈಯದ್ ಫೈಜುಲ್ಲಾ (ಫೈಜ್ನಟ್ರಾಜ್), ಸೋಮೇಶ್ವರಪ್ಪ, ಲೋಕಣ್ಣ ಮಾಗೋಡ್ರ, ಕೆ.ಬಿ. ಸುರೇಶ್ ಅವರುಗಳನ್ನು ಸನ್ಮಾನಿಸಲಾಯಿತು.

ಶ್ರೀಮತಿ ವೀಣಾ ನಿರೂಪಿಸಿದರು. ಮಲ್ಲಾಬಾದಿ ಬಸವರಾಜ್ ಸ್ವಾಗತಿಸಿದರು. ಆರ್.ಬಿ. ಪಾಟೀಲ್ ವಂದಿಸಿದರು.

## ಎಸ್ಸೆಸ್ಸೆಂ ಹುಟ್ಟುಹಬ್ಬ: ಇಂದಿನಿಂದ ವಿವಿಧ ಸೇವಾ ಕಾರ್ಯಕ್ರಮಗಳು



ದಾವಣಗೆರೆ, ಸೆ.15- ಮಾಜಿ ಸಚಿವ ಶಾಮನೂರು ಮಲ್ಲಿಕಾರ್ಜುನ್ ಅವರ ಹುಟ್ಟುಹಬ್ಬದ ಅಂಗವಾಗಿ ನಾಳೆ ದಿನಾಂಕ 16 ರಿಂದ ಇದೇ ದಿನಾಂಕ 22ರವರೆಗೆ ಜಿಲ್ಲಾ ಕಾಂಗ್ರೆಸ್ ವತಿಯಿಂದ ಪ್ರತಿ ದಿನ ವಿಶಿಷ್ಟ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿರುವುದಾಗಿ ಪ್ರಧಾನ ಕಾರ್ಯದರ್ಶಿ ದಿನೇಶ್ ಕೆ.ಶೆಟ್ಟಿ ತಿಳಿಸಿದ್ದಾರೆ.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಗೋಶಾಲೆಗೆ ಹುಲ್ಲು ವಿತರಣೆ, ಬಡವರಿಗೆ ಶಾಲು ವಿತರಣೆ, ಆರೋಗ್ಯ ಶಿಬಿರ, ಕೋವಿಡ್ ಲಸಿಕಾ ಶಿಬಿರ, ರಕ್ತದಾನ ಶಿಬಿರ, ಬಡ ಮಹಿಳೆಯರಿಗೆ ಸೀರೆ ವಿತರಣೆ, ಮಕ್ಕಳಿಗೆ ನೋಟ್ ಪುಸ್ತಕ, ವೃದ್ಧಾಶ್ರಮ ಹಾಗೂ ಬಡ ರೋಗಿಗಳಿಗೆ ಹಣ್ಣು ವಿತರಿಸುವ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ ಎಂದು ಹೇಳಿದರು.

ವಿಶೇಷವಾಗಿ ದಿನಾಂಕ 22 ರಂದು ನಗರದ ಎಲ್ಲಾ ವಾರ್ಡುಗಳಲ್ಲಿ ಪಾಲಿಕೆ ಸದಸ್ಯರು ಹಾಗೂ ಮುಖಂಡರ ಸಹಯೋಗದೊಂದಿಗೆ ಎಲ್ಲಾ ವೃತ್ತಗಳಲ್ಲಿ ಆಹಾರ ವಿತರಣೆ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ.

ಪಾಲಿಕೆ ವಿಪಕ್ಷ ನಾಯಕ ಎ.ನಾಗರಾಜ್ ಮಾತನಾಡಿ, ದಿನಾಂಕ 22 ರಂದು ಕೊರೊನಾ ಲಸಿಕಾ ಶಿಬಿರ ಹಮ್ಮಿಕೊಂಡಿರುವುದಾಗಿ ಹೇಳಿದರು.

ಪತ್ರಿಕಾಗೋಷ್ಠಿಯಲ್ಲಿ ಪಾಲಿಕೆ ಸದಸ್ಯರಾದ ಗಡಿಗುಡಾಳ್ ಮಂಜುನಾಥ್, ಚಮನ್ ಸಾಬ್, ಮುಖಂಡರುಗಳಾದ ಅಯೂಬ್ ಪೈಲ್ವಾನ್, ಶಶಿಧರ ಪಾಟೀಲ್, ಎಸ್.ಮಲ್ಲಿಕಾರ್ಜುನ್, ರಾಘವಂದ್ರ ಗೌಡ, ಹರೀಶ್ ಬಸಾಪುರ ಉಪಸ್ಥಿತರಿದ್ದರು.

**ಢೋಂಗಿ ಹಿಂದುತ್ವ:** ರಾತ್ರೋರಾತ್ರಿ ದೇವಾಲಯಗಳನ್ನು ಒಡೆದಿರುವುದು ಖಂಡನೀಯ. ರಾಜ್ಯ ಸರ್ಕಾರ ಢೋಂಗಿ ಹಿಂದುತ್ವದ ಸರ್ಕಾರ ಎಂದು ದಿನೇಶ್ ಕೆ.ಶೆಟ್ಟಿ ಹೇಳಿದರು.

ದೇವಸ್ಥಾನಗಳ ತೆರವು ಕಾರ್ಯವನ್ನು ಕಾಂಗ್ರೆಸ್ ಸರ್ಕಾರ ಮಾಡಿದ್ದರೆ ಹಿಂದೂ ಪರ ಸಂಘಟನೆಗಳು ಸುಮ್ಮನಿರುತ್ತಿರಲಿಲ್ಲ. ಆದರೆ ಈಗ ಅವರೆಲ್ಲಾ ಕಾಣೆಯಾಗಿದ್ದಾರೆ ಎಂದು ಎ.ನಾಗರಾಜ್ ಲೇವಡಿ ಮಾಡಿದರು.

## ನಗರದಲ್ಲಿ ಇಂದು ವಿದ್ಯುತ್ ವ್ಯತ್ಯಯ

ದೇವರಾಜ ಅರಸು ಬಡಾವಣೆ 'ಬಿ' ಮತ್ತು 'ಸಿ' ಬ್ಲಾಕ್, ಎಸ್‌ಪಿ ಆಫೀಸ್, ವಿಜಯನಗರ ಬಡಾವಣೆ, ರಾಜೀವ್ ಗಾಂಧಿ ಬಡಾವಣೆ ಎಸ್‌ಪಿಎಸ್ ನಗರ 2ನೇ ಹಂತ, ಎಸ್‌ಎಮ್‌ಕೆ ನಗರ, ವಾಲ್ಮೀಕಿ ಸರ್ಕಲ್ ಸುತ್ತಮುತ್ತ, ಕೆ.ಟಿ.ಜೆ. ನಗರ ಸುತ್ತಮುತ್ತ ಇಂದು ಬೆಳಿಗ್ಗೆ 10 ರಿಂದ 4 ರವರೆಗೆ ವಿದ್ಯುತ್ ವ್ಯತ್ಯಯವಾಗಲಿದೆ.


**ಬೇಕಾಗಿದ್ದಾರೆ**

✦ ಮನೆಯಲ್ಲಿ 10ನೇ ತರಗತಿ ವಿದ್ಯಾರ್ಥಿಗೆ ಐಸಿಎಸ್‌ಇ ಪಠ್ಯ ಕ್ರಮದ ಗಣಿತ ವಿಷಯ ಬೋಧಿಸಲು ಗಣಿತ ಶಿಕ್ಷಕರು ಬೇಕಾಗಿದ್ದಾರೆ.

✦ ಬೆಳಿಗ್ಗೆ 8 ರಿಂದ ಸಂಜೆ 5.30ರವರೆಗೆ. ಸಸ್ಯಹಾರಿ ಅಡುಗೆ ಮಾಡಲು ಬೇಕಾಗಿದ್ದಾರೆ.

99015-88555







## ಹರಿಹರದಲ್ಲಿ ಇಂದು ವಿದ್ಯುತ್ ವ್ಯತ್ಯಯ

ಬಾಲಾಜಿ, ಹರಿಹರೇಶ್ವರ, ಬೈಪಾಸ್, ತರಳಬಾಳು ಸ್ಕೂಲ್, ಹರಿಹರೇಶ್ವರ ಬಡಾವಣೆ, ವಿದ್ಯಾನಗರ, ಜೆ.ಸಿ. ಬಡಾವಣೆ, ಇಂದಿರಾನಗರ, ಶಿವಮೊಗ್ಗ ರಸ್ತೆ, ಊರಮ್ಮ ದೇವಸ್ಥಾನ, ಪ್ರಶಾಂತನಗರ, ಕಾಳಿದಾಸ ನಗರ, ಮೊದಲನೆಯ ರೈಲ್ವೆ ಗೇಟ್, ಬಾಹರ್ ಮಕಾನ್, ಜ್ಯೋತಿರ್‌ಮಠ, ದೇವಸ್ಥಾನದ ರಸ್ತೆ, ಎಪಿಎಂಸಿ, ಚರ್ಚ್ ಏರಿಯಾ, ಹರಿಹರೇಶ್ವರ ದೇವಸ್ಥಾನದ ಸುತ್ತಮುತ್ತ ಬಡಾವಣೆಗಳಲ್ಲಿ ಇಂದು ಬೆಳಿಗ್ಗೆ 10 ರಿಂದ ಸಂಜೆ 3 ರವರೆಗೆ ವಿದ್ಯುತ್ ವ್ಯತ್ಯಯವಾಗಲಿದೆ.


**ಭಾವಪೂರ್ಣ ಶ್ರದ್ಧಾಂಜಲಿ**



ದಿನಾಂಕ 14.9.2021ರಂದು ಅಕಾಲಿಕವಾಗಿ ನಿಧನರಾದ

ಬಸವ ತತ್ವದ ಪರಿಪಾಲಕರಾದ

**ಶರಣ ದೇವಿಗೆರೆ ವೀರಭದ್ರಪ್ಪ**

ಅವರಿಗೆ ಭಾವಪೂರ್ಣ ಶ್ರದ್ಧಾಂಜಲಿ.

ಅವರ ಆತ್ಮಕ್ಕೆ ಚಿರಶಾಂತಿ ನೀಡಲೆಂದು ಮತ್ತು ಅವರ ಕುಟುಂಬ ವರ್ಗದವರಿಗೆ ಅವರ ಅಗಲಿಕೆಯ ದುಃಖವನ್ನು ಭರಿಸುವ ಶಕ್ತಿಯನ್ನು ಕರುಣಿಸಲೆಂದು ವಿಶ್ವಗುರು ಬಸವಣ್ಣನವರಲ್ಲಿ ಪ್ರಾರ್ಥಿಸುತ್ತೇವೆ.

ಪದಾಧಿಕಾರಿಗಳು ಮತ್ತು ಸರ್ವ ಸದಸ್ಯರು

**ಬಸವ ಬಳಗ ಮತ್ತು ನೀಲಾಂಬಿಕಾ ಅನುಭಾವ ಕೇಂದ್ರ**

ಬಸವ ಮಹಾಮನೆ, ಸರಸ್ವತಿ ಬಡಾವಣೆ, ದಾವಣಗೆರೆ.



Hearty Congratulations



**Mr. K. Javeed Saab**

for RAZVI Traders &

**Mr. Afaq Razvi K.J.**

for SKMS Motors Pvt Ltd

Awarded for

TRADE EXCELLENCE AWARDS 2021

FKCCI- Federation of Karnataka Chambers of Commerce and Industry

Best Wihes from

*KJ Hyundai & Tanishq Employees, Families & Friends*


**JANATHAVANI** - Published, Owned and Printed by Vikas Shadaksharappa Mellekatte, at Jayadhara Offset Printers, # 605, 'Jayadhara' Hadadi Road, Davangere - 5, Published from # 605, 'Jayadhara' Hadadi Road, Davangere - 5. Editor Vikas Shadaksharappa Mellekatte